03 June 2026 Wednesday SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

info.varthaman@gmail.com

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 187 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3


**ಭಾವನಾಂತರಂಗ**

ನೆನಪುಗಳು ಬಹಳ ಶಕ್ತಿಯುತವಾಗಿವೆ!
ಅವು ನಿನ್ನೆಯನ್ನು ಇಂದಿಗೂ
ಜೀವಂತವಾಗಿರಿಸುತ್ತದೆ!

-ಸ್ನೇಹಾ ಆನಂದ್



ಜಿಲ್ಲೆಯಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ: ಡಿಸಿ ಶ್ರೀರೂಪ — ಪುಟ ಸಂ. 2


ಯತೀಂದ್ರಗೆ ಡಿಸಿಎಂ ಹುದ್ದೆ ನೀಡುವಂತೆ ಕುರುಬ ಸಂಘ ಆಗ್ರಹ — ಪುಟ ಸಂ. 3


ಡಿಕೆಶಿ: ಕರ್ನಾಟಕದ ಹೊಸ ನಾಯಕತ್ವದ ಅಧ್ಯಾಯ — ಪುಟ ಸಂ. 4


# ಇಂದು ಡಿಕೆಶಿ ಪದಗ್ರಹಣ

## ಖರ್ಗೆ ನಿವಾಸದಲ್ಲಿ ಕಾಂಗ್ರೆಸ್ ನಾಯಕರ ಸಂಪುಟ ರಚನೆ ಕಸರತ್ತು । ಮುಖ್ಯಮಂತ್ರಿ ಜೊತೆ 10ರಿಂದ 12 ಸಚಿವರ ಪ್ರಮಾಣ ವಚನ ಸಾಧ್ಯತೆ

**ನವದೆಹಲಿ:** ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅವರೊಂದಿಗೆ ಸಚಿವ ಸಂಪುಟದ ಸದಸ್ಯರ ಆಯ್ಕೆ ಕಸರತ್ತು ಸಹ ನಡೆಯುತ್ತಿದೆ. ಮೊದಲ ತಂಡದಲ್ಲಿ ಪ್ರಮಾಣ ವಚನ ಸ್ವೀಕರಿಸುವ 10ರಿಂದ 12 ಮಂದಿ ಸಚಿವರ ಆಯ್ಕೆ ಅಂತಿಮವಾಗಿದೆ ಎಂದು ತಿಳಿದುಬಂದಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಿವಾಸದಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ನಿಯೋಜಿತ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಉಸ್ತುವಾರಿ ಸಿಎಂ ಸಿದ್ದರಾಮಯ್ಯ ಭಾಗವಹಿಸಿದ್ದರು. ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರೊಂದಿಗೆ ಸಚಿವ ಸಂಪುಟ ರಚನೆ ಬಗ್ಗೆ ಮಹತ್ವದ ಮಾತುಕತೆ ನಡೆಸಲಾಗಿದೆ ಎನ್ನಲಾಗಿದೆ.

ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಬುಧವಾರ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಈ ನಡುವೆ ಸಚಿವ ಸಂಪುಟದಲ್ಲಿ ಸ್ಥಾನ ಪಡೆಯಲು ನಾಯಕರಿಂದ ಲಾಬಿ ಮುಂದುವರಿದಿದೆ. ಮೊದಲ ಹಂತದಲ್ಲಿ 10 ಮಂದಿ ಸಚಿವರಾಗಿ ಪ್ರಮಾಣವಚನ ಸ್ವೀಕರಿಸುವ ಸಾಧ್ಯತೆ ಇದೆ. ರಾಜ್ಯಸಭೆ ಹಾಗೂ ವಿಧಾನ ಪರಿಷತ್ ಚುನಾವಣೆ ಮುಗಿದ ಬಳಿಕ ಮತ್ತೊಂದಷ್ಟು ಶಾಸಕರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲು ಕಾಂಗ್ರೆಸ್ ಚಿಂತನೆ ನಡೆಸಿದೆ ಎಂದು ತಿಳಿದುಬಂದಿದೆ.

ಜೂನ್ 3ರಂದು ಸಂಜೆ 4.5ಕ್ಕೆ ಲೋಕಭವನದಲ್ಲಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಿ



ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಸಚಿವ ಸ್ಥಾನ, ಉಪ ಮುಖ್ಯಮಂತ್ರಿ ಹುದ್ದೆ ಮತ್ತು ರಾಜ್ಯ ಘಟಕದೊಳಗಿನ ಸಾಂಸ್ಥಿಕ ಪುನರ್ರಚನೆ ಸೇರಿದಂತೆ ಹೊಸ ಕರ್ನಾಟಕ ಸಚಿವ ಸಂಪುಟದ ರಚನೆಯನ್ನು ಅಂತಿಮಗೊಳಿಸಲು ಕಾಂಗ್ರೆಸ್ ಹೈಕಮಾಂಡ್ ಮುಂದಾಗಿರುವ ಹಿನ್ನೆಲೆಯಲ್ಲಿ ಈ ಸಭೆ ಮಹತ್ವ ಪಡೆದುಕೊಂಡಿದೆ.

ವರಿಷ್ಠರು ಈ ಬಾರಿ ವಿಶೇಷ ಸೂತ್ರವನ್ನು ಅನುಸರಿಸುತ್ತಿದ್ದಾರೆ ಎನ್ನಲಾಗಿದೆ. ಸಂಪುಟದಲ್ಲಿ ಹಳೆ ಬೇರು, ಹೊಸ ಚಿಗುರು ಫಾರ್ಮುಲಾ ಅನ್ವಯಿಸಲು ಹೈಕಮಾಂಡ್ ಗಂಭೀರ ಚಿಂತನೆ ನಡೆಸಿದೆ. ಇದರಂತೆ ಅನುಭವಿ ಹಿರಿಯ ನಾಯಕರ ಜೊತೆಗೆ ಯುವ ಮತ್ತು ಹೊಸ ಮುಖಗಳಿಗೂ ಹೆಚ್ಚಿನ ಆದ್ಯತೆ ಸಿಗಲಿದೆ.

ಪುಟ 2ಕ್ಕೆ

### ಸಚಿವರು ಯರ್‍ಯಾರು?

- ಪ್ರಿಯಾಂಕ್ ಖರ್ಗೆ
- ಯತೀಂದ್ರ ಸಿದ್ದರಾಮಯ್ಯ
- ಯು.ಟಿ.ಖಾದರ್
- ಕೆ.ಹೆಚ್.ಮುನಿಯಪ್ಪ
- ಎಂ.ಬಿ.ಪಾಟೀಲ್
- ಡಾ.ಜಿ.ಪರಮೇಶ್ವರ್
- ಕೆ.ಜೆ.ಜಾರ್ಜ್
- ರಾಮಲಿಂಗಾರೆಡ್ಡಿ
- ಕೃಷ್ಣ ಬೈರೆಗೌಡ
- ಬಿ.ಕೆ.ಹರಿಪ್ರಸಾದ್
- ಚಲುವರಾಯಸ್ವಾಮಿ
- ಬೈರತಿ ಸುರೇಶ್

### ಸಿಎಂ ಕಚೇರಿಯಲ್ಲಿ ಅಜ್ಜಯ್ಯನ ಚಿತ್ರ ಅಳವಡಿಕೆ

ಬೆಂಗಳೂರು: ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿರುವ ಡಿ.ಕೆ ಶಿವಕುಮಾರ್ ಕೊಠಡಿಗೆ ಜ್ಯೋತಿಷಿಗಳು ಮಂಗಳವಾರ ಭೇಟಿ ನೀಡಿ ವಾಸ್ತು ಪರೀಶೀಲಿಸಿದ್ದಾರೆ.

ಶಿವಕುಮಾರ್ ಕುಳಿತುಕೊಳ್ಳಲಿರುವ ಕುರ್ಚಿಯ ವಾಸ್ತು ನೋಡಿರುವ ಜ್ಯೋತಿಷಿಗಳು, ಕುರ್ಚಿಯ ದಿಕ್ಕನ್ನು ಬದಲಿಸಿದ್ದಾರೆ. ಅಲ್ಲದೆ, ವಿಧಾನಸೌಧದ ಮೂರನೇ ಮಹಡಿಯ ಮುಖ್ಯಮಂತ್ರಿ ಕೊಠಡಿಯಲ್ಲಿ ಅಜ್ಜಯ್ಯನ ಚಿತ್ರ ಅಳವಡಿಸಲಾಗಿದೆ.

ಡಿ.ಕೆ ಶಿವಕುಮಾರ್ ಅಜ್ಜಯ್ಯನನ್ನು ಬಲವಾಗಿ ನಂಬುತ್ತಾರೆ. ನಾನು ರಾಜನಾಗುವೆ ಎಂದು ನೊಣವಿನಕೆರೆ ಅಜ್ಜಯ್ಯ ಬಾಲ್ಯದಲ್ಲಿಯೇ ಹೇಳಿದ್ದರು. ಅಜ್ಜಯ್ಯನ ಅನುಗ್ರಹದಿಂದ ಮುಖ್ಯಮಂತ್ರಿ ಆಗುತ್ತಿದ್ದೇನೆ ಎಂದು ಡಿ.ಕೆ. ಶಿವಕುಮಾರ್ ಈ ಹಿಂದೆ ಹೇಳಿದ್ದರು. ಜ್ಯೋತಿಷಿಗಳ ಸಲಹೆಯಂತೆ ಅಜ್ಜಯ್ಯನ ಚಿತ್ರ ಅಳವಡಿಸಲಾಗಿದೆ.

### ಲೋಕಭವನದ ಸುತ್ತ ಭದ್ರತೆ, ಸಕಲ ಸಿದ್ಧತೆ

**ಬೆಂಗಳೂರು:** ನೂತನ ಮುಖ್ಯಮಂತ್ರಿಯಾಗಿ ಕಾಂಗ್ರೆಸ್ ನಾಯಕ ಡಿ.ಕೆ ಶಿವಕುಮಾರ್ ಅವರು ಬುಧವಾರ ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಲೋಕ ಭವನದಲ್ಲಿ ವ್ಯಾಪಕ ವ್ಯವಸ್ಥೆ ಮಾಡಲಾಗಿದೆ.

ವಿಧಾನಸೌಧ ಮತ್ತು ಲೋಕಭವನ ಪ್ರದೇಶದ ಸುತ್ತಲೂ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಡಿ.ಕೆ ಶಿವಕುಮಾರ್ ಮತ್ತು ನಿರ್ಗಮಿತ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಹಲವು ನಾಯಕರ ದೊಡ್ಡ ಬ್ಯಾನರ್‌ಗಳನ್ನು ಹಾಕಲಾಗಿದೆ.

ಕರ್ನಾಟಕ ಕಾಂಗ್ರೆಸ್ ಅಧ್ಯಕ್ಷರೂ ಆಗಿರುವ ಶಿವಕುಮಾರ್ ಬುಧವಾರ ಸಂಜೆ 4.05 ಗಂಟೆಗೆ ಲೋಕ ಭವನದಲ್ಲಿ ಸಚಿವ ಸಂಪುಟದ ಕೆಲವು ಸದಸ್ಯರೊಂದಿಗೆ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.


ಲೋಕಭವನ ಸುತ್ತಲೂ ಬಿಗಿ ಭದ್ರತಾ ವ್ಯವಸ್ಥೆಗಳನ್ನು ಮಾಡಲಾಗಿದೆ. ಲೋಕ ಭವನಕ್ಕೆ ಹೋಗುವ ರಸ್ತೆಗಳಲ್ಲಿ ಬ್ಯಾರಿಕೇಡ್‌ಗಳನ್ನು ಹಾಕಲಾಗಿದೆ.

ಹಿರಿಯ ಅಧಿಕಾರಿಗಳು ಮತ್ತು ಶಿಷ್ಟಾಚಾರ ಅಧಿಕಾರಿಗಳೊಂದಿಗೆ ಸಭೆಗಳನ್ನು ನಡೆಸಲಾಗಿದೆ ಎಂದು ಬೆಂಗಳೂರು ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಹೇಳಿದರು.

ರಾಜಭವನದ ಹೊರಗೆ ಕಾರ್ಯಕ್ರಮವನ್ನು ವೀಕ್ಷಿಸಲು ಎಲ್ಇಡಿ

## ರಾಜ್ಯಪಾಲರಿಗೆ ಬಿಜೆಪಿ ದೂರು

### ಲಾಡ್ಲೆ ಮಶಾಕ್ ದರ್ಗಾ ಪ್ರಕರಣ ವಾಪಸ್‌ಗೆ ಆಕ್ಷೇಪ



**ಬೆಂಗಳೂರು:** ಆಳಂದದ ಲಾಡ್ಲೆ ಮಶಾಕ್ ದರ್ಗಾ ಗಲಾಟೆ ಪ್ರಕರಣವನ್ನು ವಾಪಸ್ ಪಡೆದ ರಾಜ್ಯ ಸರ್ಕಾರದ ನಿರ್ಧಾರವನ್ನು ರದ್ದುಗೊಳಿಸಲು ಸೂಚಿಸಬೇಕು ಎಂದು ಬಿಜೆಪಿ ನಿಯೋಗ ರಾಜ್ಯಪಾಲರಿಗೆ ಮಂಗಳವಾರ ದೂರು ಸಲ್ಲಿಸಿದೆ.

ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ನೇತೃತ್ವದ ಬಿಜೆಪಿ ನಿಯೋಗ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರನ್ನು ಭೇಟಿ ಮಾಡಿ ದೂರು ಸಲ್ಲಿಸಿದ್ದಾರೆ.

ಆಳಂದದ ಲಾಡ್ಲೆ ಮಶಾಕ್ ದರ್ಗಾ ಗಲಾಟೆ ಪ್ರಕರಣವನ್ನು ಸರ್ಕಾರ ವಾಪಸ್ ಪಡೆದಿದೆ. ಈ ನಿರ್ಧಾರವನ್ನು ರದ್ದುಗೊಳಿಸಲು ಸೂಚಿಸುವಂತೆ ರಾಜ್ಯಪಾಲರಿಗೆ ದೂರಿನಲ್ಲಿ ಮನವಿ ಮಾಡಿದೆ.

ಮಾಧ್ಯಮಗಳೊಂದಿಗೆ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ಕೇಸ್ ಹಿಂಪಡೆಯುವ ಮೂಲಕ ಕ್ರಿಮಿನಲ್ ಆಕ್ಟಿವಿಟಿ ಮಾಡಿರೋರಿಗೆ ಶಿಕ್ಷೆ ತಪ್ಪಿಸೋ ಕೆಲಸ ಮಾಡಿದ್ದಾರೆ. ಇದು ಹಿಂದುತ್ವಕ್ಕೆ, ಹಿಂದೂಗಳಿಗೆ ಮಾಡಿರೋ ಅಪಮಾನ ಎಂದು ಕಿಡಿಕಾರಿದರು.

## ಸರ್ವಧರ್ಮದ 55 ಶ್ರೀಗಳು, ಧಾರ್ಮಿಕ ನಾಯಕರಿಗೆ ಆಹ್ವಾನ

**ಬೆಂಗಳೂರು:** ನಿಯೋಜಿತ ಸಿಎಂ ಡಿ.ಕೆ.ಶಿವಕುಮಾರ್ ಬುಧವಾರ ಸಂಜೆ 4.05ಕ್ಕೆ ಲೋಕಭವನದಲ್ಲಿ ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಈ ಸಮಾರಂಭ ಹಲವು ವಿಶೇಷತೆಗಳಿಗೆ ಸಾಕ್ಷಿಯಾಗುತ್ತಿದೆ.

ರಾಜ್ಯದ ಇತಿಹಾಸದಲ್ಲೇ ಮೊದಲ ಬಾರಿಗೆ ಡಿ.ಕೆ.ಶಿವಕುಮಾರ್ ಅವರು, ಸ್ವಾಮೀಜಿ, ಫಾದರ್ ಹಾಗೂ ಮೌಲ್ವಿ ಸೇರಿದಂತೆ ಸರ್ವಧರ್ಮಗಳ ಸ್ವಾಮೀಜಿಗಳ ಸಮ್ಮುಖದಲ್ಲಿ ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕಾರ ಮಾಡಲಿದ್ದಾರೆ.

ಇದುವರೆಗೂ ರಾಜ್ಯದಲ್ಲಿ ಯಾವುದೇ ನಾಯಕ ಸರ್ವಧರ್ಮಗಳ ಸ್ವಾಮೀಜಿಗಳ ಸಮ್ಮುಖದಲ್ಲಿ ಸಿಎಂ ಆಗಿ ಪ್ರಮಾಣವಚನ ಸ್ವೀಕರಿಸಿದ ಉದಾಹರಣೆ ಇಲ್ಲ. ಹೀಗಾಗಿ ಡಿಕೆ ಶಿವಕುಮಾರ್ ಅವರೇ ಮೊದಲ

ಪುಟ 2ಕ್ಕೆ

# ಕೆಪಿಸಿಸಿ ಅಧ್ಯಕ್ಷರ ಆಯ್ಕೆಗೂ ಕಸರತ್ತು

## ಸತೀಶ್ ಜಾರಕಿಹೊಳಿ ನೇಮಕಕ್ಕೆ ಸಿದ್ದರಾಮಯ್ಯ ಅಸಮ್ಮತಿ ಜಿ. ಪರಮೇಶ್ವರ್ ಬಗ್ಗೆ ಮಾಜಿ ಮುಖ್ಯಮಂತ್ರಿ ಒಲವು

**ಬೆಂಗಳೂರು:** ರಾಜ್ಯ ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಆಯ್ಕೆ ಪ್ರಕ್ರಿಯೆ ಮುಗಿದ ಬೆನ್ನಲ್ಲಿಯೇ ಕೆಪಿಸಿಸಿ ಅಧ್ಯಕ್ಷರ ಆಯ್ಕೆ ಕಸರತ್ತು ಆರಂಭವಾಗಿದೆ.

ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಹುದ್ದೆ ಸ್ವೀಕರಿಸಿದ ನಂತರ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಲಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಗಾದಿಗೆ ಹಲವು ಹಿರಿಯ ನಾಯಕರು ಕಸರತ್ತು ಆರಂಭಿಸಿದ್ದಾರೆ.

ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿದಿರುವ ಸಿದ್ದರಾಮಯ್ಯ ಅವರು, ಕೆಪಿಸಿಸಿ ಅಧ್ಯಕ್ಷ ಹುದ್ದೆಯನ್ನು ಸತೀಶ್ ಜಾರಕಿಹೊಳಿ ಅವರಿಗೆ ವಹಿಸುವ ಬಗ್ಗೆ ಅಸಮ್ಮತಿ ಸೂಚಿಸಿದ್ದಾರೆ. ಇದುವರೆಗೆ ಜಾರಕಿಹೊಳಿಗೆ ಬೆಂಬಲವಾಗಿದ್ದ ಸಿದ್ದರಾಮಯ್ಯ ಅವರು ದಿಢೀರ್ ಆಗಿ ತಮ್ಮ ಆಟ ಬದಲಿಸಿದ್ದಾರೆ ಎನ್ನಲಾಗಿದೆ.

ಕಾಂಗ್ರೆಸ್ ಹೈಕಮಾಂಡ್ ಸತೀಶ್ ಜಾರಕಿಹೊಳಿ ಹೆಸರನ್ನು ಪರಿಗಣಿಸುತ್ತಿದೆ ಎಂಬ ಚರ್ಚೆ ನಡುವೆಯೇ ಸಿದ್ದರಾಮಯ್ಯ ಅವರು ಪರ್ಯಾಯವಾಗಿ ಬಿ.ಕೆ.ಹರಿಪ್ರಸಾದ್, ಜಿ.ಪರಮೇಶ್ವರ್ ಹಾಗೂ ಶಿವರಾಜ್ ತಂಗಡಗಿ ಅವರ ಹೆಸರು ಮುಂದಿಟ್ಟಿದ್ದಾರೆ. ಅಹಿಂದ ಸಮುದಾಯಕ್ಕೆ ಆದ್ಯತೆ ನೀಡಬೇಕೆಂಬ ಅಭಿಪ್ರಾಯ ಸಿದ್ದರಾಮಯ್ಯ ಅವರಿಗಿದೆ. ಇದೇ ಕಾರಣಕ್ಕೆ ಈ ನಾಯಕರ ಹೆಸರುಗಳನ್ನು ಪ್ರಸ್ತಾಪಿಸಿದ್ದಾರೆ ಎಂದು ಮೂಲಗಳಿಂದ ತಿಳಿದುಬಂದಿದೆ.



ಇನ್ನೊಂದೆಡೆ, ಸತೀಶ್ ಜಾರಕಿಹೊಳಿ ಅವರಿಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನದ ಜೊತೆಗೆ ಸಚಿವ ಸಂಪುಟದಲ್ಲೂ ಸ್ಥಾನ ಬೇಕೆಂಬ ಬೇಡಿಕೆ ಇದೆ. ಹೈಕಮಾಂಡ್ ಈ ಎರಡೂ ಹುದ್ದೆಗಳನ್ನು ನೀಡಲು ಒಪ್ಪುತ್ತಿಲ್ಲ. ಹೀಗಾಗಿ ಸತೀಶ್ ಅವರಿಗೆ ಅಧ್ಯಕ್ಷ ಸ್ಥಾನ ಸಿಗುವ ಸಾಧ್ಯತೆ ಇಲ್ಲ ಎನ್ನಲಾಗಿದೆ.

ಕೆಪಿಸಿಸಿ ಅಧ್ಯಕ್ಷರ ಹುದ್ದೆ ರೇಸ್‌ನಲ್ಲಿ ಹಿರಿಯ ನಾಯಕ ಎಂಬಿ.ಪಾಟೀಲ್ ಹೆಸರೂ ಕೇಳಿಬರುತ್ತಿದೆ. ಲಿಂಗಾಯತ ಸಮುದಾಯದಲ್ಲಿ ಪ್ರಭಾವ ಹೊಂದಿರುವ ಎಂ.ಬಿ ಪಾಟೀಲ್ ಹೆಸರು ಪಕ್ಷದಲ್ಲಿ ಪ್ರಮುಖವಾಗಿ ಪ್ರಸ್ತಾಪವಾಗುತ್ತಿದೆ ಎಂದು ಹೇಳಲಾಗುತ್ತಿದೆ. ಜೊತೆಗೆ ಆರು ಬಾರಿ ಶಾಸಕರಾಗಿರುವ ಸಿ.ಎಸ್.ನಾಡಗೌಡ, ಮಾಜಿ ಸಚಿವ ಈಶ್ವರ ಖಂಡ್ರೆ ಹೆಸರೂ ಚರ್ಚೆಯಲ್ಲಿದೆ. ಅಲ್ಲದೆ, ಇರ್‍ಯಾರೂ ಅಲ್ಲದ ಅಚ್ಚರಿಯ ಆಯ್ಕೆಯಾಗುವ ಸಾಧ್ಯತೆಯನ್ನೂ ತಳ್ಳಿಹಾಕುವಂತಿಲ್ಲ.

ಇತ್ತೀಚೆಗೆ ಬಿ.ಕೆ.ಹರಿಪ್ರಸಾದ್ ಪ್ರಮುಖ ಸ್ಪರ್ಧಿಯಾಗಿ ಹೊರಹೊಮ್ಮಿದ್ದಾರೆ. ಪಕ್ಷ ಸಂಘಟನೆಯಲ್ಲಿ ದೀರ್ಘ

ಪುಟ 2ಕ್ಕೆ

## ಜಾರಕಿಹೊಳಿಗೆ ಹಿಂದುಳಿದ ವರ್ಗದ ಶ್ರೀಗಳ ಬೆಂಬಲ

**ಬೆಂಗಳೂರು:** ರಾಜ್ಯ ಕಾಂಗ್ರೆಸ್‌ನಲ್ಲಿ ಕೆಪಿಸಿಸಿ ಅಧ್ಯಕ್ಷರ ಕುರಿತ ಚರ್ಚೆ ತೀವ್ರಗೊಂಡಿರುವ ನಡುವೆಯೇ ಹಿರಿಯ ಕಾಂಗ್ರೆಸ್ ನಾಯಕ ಸತೀಶ್ ಜಾರಕಿಹೊಳಿ ಅವರನ್ನು 21 ಸ್ವಾಮೀಜಿಗಳ ನಿಯೋಗ ಭೇಟಿ ಮಾಡಿ ಮಹತ್ವದ ಮಾತುಕತೆ ನಡೆಸಿದೆ.

ಈ ಭೇಟಿಯಲ್ಲಿ ಹಿಂದುಳಿದ ವರ್ಗಗಳು, ದಲಿತರು ಹಾಗೂ ಆದಿವಾಸಿ ಸಮುದಾಯಗಳಿಗೆ ಪಕ್ಷ ಸಂಘಟನೆ ಮತ್ತು ಸರ್ಕಾರದಲ್ಲಿ ಹೆಚ್ಚಿನ ಪ್ರಾತಿನಿಧ್ಯ ನೀಡುವ ವಿಷಯ ಕುರಿತು ಚರ್ಚೆಯಾಗಿದೆ ಎಂದು ತಿಳಿದುಬಂದಿದೆ.

ಬೆಂಗಳೂರಿನ ಸತೀಶ್ ಜಾರಕಿಹೊಳಿ ನಿವಾಸದಲ್ಲಿ ನಡೆದ ಈ ಸಭೆ ರಾಜಕೀಯ ವಲಯದಲ್ಲಿ ಸಾಕಷ್ಟು ಕುತೂಹಲಕ್ಕೆ ಕಾರಣವಾಗಿದೆ.

ನಿಯೋಗದಲ್ಲಿ ಬೋವಿ ಸಮುದಾಯ, ವಾಲ್ಮೀಕಿ ಪೀಠ, ಕುರುಬ, ಮಡಿವಾಳ ಸೇರಿದಂತೆ ವಿವಿಧ ಹಿಂದುಳಿದ ವರ್ಗಗಳು ಹಾಗೂ ಪರಿಶಿಷ್ಟ ಜಾತಿ–ಪಂಗಡಗಳಿಗೆ ಸೇರಿದ ಧಾರ್ಮಿಕ ಮುಖಂಡರು ಭಾಗವಹಿಸಿದ್ದರು ಎನ್ನಲಾಗಿದೆ.

ಕೆಪಿಸಿಸಿ ಅಧ್ಯಕ್ಷ ಸ್ಥಾನವನ್ನು ಹಿಂದುಳಿದ ವರ್ಗದ ನಾಯಕರಿಗೆ ನೀಡಬೇಕು ಎಂಬ ಅಭಿಪ್ರಾಯವನ್ನು ಸ್ವಾಮೀಜಿಗಳು ವ್ಯಕ್ತಪಡಿಸಿದ್ದಾರೆ. ಕಾಂಗ್ರೆಸ್‌ನ ಪ್ರಭಾವಿ ಒಬಿಸಿ ನಾಯಕರಲ್ಲಿ ಒಬ್ಬರಾಗಿರುವ ಸತೀಶ್ ಜಾರಕಿಹೊಳಿ ಆ ಹುದ್ದೆಗೆ ಸೂಕ್ತ ಅಭ್ಯರ್ಥಿ ಎಂದು ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ ಎಂದು ತಿಳಿದುಬಂದಿದೆ.




## ಮೊದಲನೇ ಪುಟದಿಂದ

### ಲೋಕಭವನದ ಸುತ್ತ ಭದ್ರತೆ, ಸಕಲ ಸಿದ್ಧತೆ

ಪರದೆಗಳನ್ನು ಅಳವಡಿಸಲಾಗಿದೆ. ಲೋಕಭವನದ ಸುತ್ತಮುತ್ತ ಸಾರ್ವಜನಿಕ ಸಭೆಗಳನ್ನು ನಿಷೇಧಿಸಲಾಗಿದೆ. ಸುತ್ತಲಿನ ರಸ್ತೆಗಳಲ್ಲಿ ಸಾರ್ವಜನಿಕ ಸಂಚಾರವನ್ನು ನಿಷೇಧಿಸಲಾಗಿದೆ.

### ಇಂದು ಡಿಕೆಶಿ ಪದಗ್ರಹಣ

ಸುಮಾರು 8 ರಿಂದ 10 ಹೊಸ ಶಾಸಕರಿಗೆ ಈ ಬಾರಿ ಮಂತ್ರಿಭಾಗ್ಯ ಒಲಿಯುವ ಸಾಧ್ಯತೆ ಇದೆ. ಎಷ್ಟು ಯುವ ಮುಖಗಳಿಗೆ ಹೈಕಮಾಂಡ್ ಮಣೆ ಹಾಕಲಿದೆ ಎಂಬುದು ತೀವ್ರ ಕುತೂಹಲ ಮೂಡಿಸಿದೆ.

ಸದ್ಯಕ್ಕೆ ಲಭ್ಯವಿರುವ ಮಾಹಿತಿಯ ಪ್ರಕಾರ, ಹೈಕಮಾಂಡ್ ಎರಡು ಹಂತಗಳಲ್ಲಿ ಸಂಪುಟ ರಚನೆ ಮಾಡಲು ಕರಡು ಸಿದ್ಧಪಡಿಸಿದೆ. ಮೊದಲ ಹಂತದಲ್ಲಿ 10ರಿಂದ 12 ಪ್ರಮುಖ ಶಾಸಕರು ಮಾತ್ರ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

### ಕೆಪಿಸಿಸಿ ಅಧ್ಯಕ್ಷರ ಆಯ್ಕೆಗೂ ಕಸರತ್ತು

ಅನುಭವ ಮತ್ತು ಹೈಕಮಾಂಡ್ ಜತೆಗಿನ ನಿಕಟ ಸಂಪರ್ಕ ಅವರ ಪರವಾಗಿ ಕೆಲಸ ಮಾಡುತ್ತಿದೆ ಎನ್ನಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಅವರ ಹೆಸರು ಬಲವಾಗಿ ಕೇಳಿಬರುತ್ತಿದೆ.

ಈ ಸಂದರ್ಭದಲ್ಲಿ ಸಿದ್ದರಾಮಯ್ಯ ಮತ್ತು ಸತೀಶ್ ಜಾರಕಿಹೊಳಿ ನಡುವಿನ ಭಿನ್ನಾಭಿಪ್ರಾಯಗಳ ಬಗ್ಗೆಯೂ ಪಕ್ಷದೊಳಗೆ ಚರ್ಚೆಗಳು ನಡೆಯುತ್ತಿವೆ. ಯತೀಂದ್ರ ಸಿದ್ದರಾಮಯ್ಯ ಅವರು ಸತೀಶ್ ಇಲಾಖೆಯ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡಿದ್ದ ಹಿನ್ನೆಲೆಯಲ್ಲಿ ಇಬ್ಬರ ನಡುವೆ ಭಿನ್ನಾಭಿಪ್ರಾಯ ತಲೆದೋರಿತ್ತು ಎನ್ನಲಾಗಿದೆ.

ನಾಯಕತ್ವ ಬದಲಾವಣೆ ಚರ್ಚೆ ತೀವ್ರಗೊಂಡ ಬಳಿಕ ಸತೀಶ್ ಜಾರಕಿಹೊಳಿ ಅವರು ಡಿ.ಕೆ. ಶಿವಕುಮಾರ್ ಹಾಗೂ ಡಿಕೆ.ಸುರೇಶ್ ಅವರೊಂದಿಗೆ ಹಲವು ಸುತ್ತಿನ ಮಾತುಕತೆ ನಡೆಸಿದ್ದರು. ಜೊತೆಗೆ ಮಲ್ಲಿಕಾರ್ಜುನ ಖರ್ಗೆ ಅವರನ್ನೂ ಭೇಟಿ ಮಾಡಿದ್ದರು.

ಒಟ್ಟಾರೆ, ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗುವ ಪ್ರಕ್ರಿಯೆ ಅಂತಿಮ ಹಂತದಲ್ಲಿರುವಾಗ, ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕಾಗಿ ಕಾಂಗ್ರೆಸ್‌ನಲ್ಲಿ ಪೈಪೋಟಿ ಆರಂಭವಾಗಿದೆ. ಜಾತಿ, ಪ್ರಾದೇಶಿಕ ಹಾಗೂ ರಾಜಕೀಯ ಸಮತೋಲನ ಕಾಯ್ದುಕೊಳ್ಳುವ ಸವಾಲಿನ ನಡುವೆ ಹೈಕಮಾಂಡ್ ಅಂತಿಮವಾಗಿ ಯಾರಿಗೆ ಅವಕಾಶ ನೀಡಲಿದೆ ಎಂಬುದು ಕುತೂಹಲ ಮೂಡಿಸಿದೆ.

### ಸರ್ವಧರ್ಮದ 55 ಶ್ರೀಗಳು, ಧಾರ್ಮಿಕ ನಾಯಕರಿಗೆ ಆಹ್ವಾನ

ಬಾರಿಗೆ ಎಲ್ಲಾ ಧರ್ಮಗಳ ಸ್ವಾಮೀಜಿಗಳ ಸಮ್ಮುಖದಲ್ಲಿ ಪ್ರಮಾಣವಚನ ಸ್ವೀಕರಿಸುತ್ತಿದ್ದಾರೆ.

ಈ ಸಂಬಂಧ ಈಗಾಗಲೇ ಎಲ್ಲಾ ಧರ್ಮ, ಜಾತಿಗಳ ಸುಮಾರು 55 ಸ್ವಾಮೀಜಿಗಳಿಗೆ ಆಹ್ವಾನ ನೀಡಲು ಸೂಚನೆ ನೀಡಲಾಗಿದೆ. ಈ ಮೂಲಕ ಸರ್ವ ಧರ್ಮ ಸಹಿಷ್ಣುತೆ, ಪರಸ್ಪರ ಸಹಬಾಳ್ವೆ, ಶಾಂತಿ ಸೌಹಾರ್ದತೆಯ ಸಂದೇಶ ಸಾರಲು ಡಿಕೆಶಿ ಮುಂದಾಗಿದ್ದಾರೆ. ಕಾರ್ಯಕ್ರಮಕ್ಕೆ ಸರ್ಕಾರದಿಂದ ರಾಜ್ಯದ ವಿವಿಧ ಮಠಾಧಿಪತಿಗಳಿಗೆ ಆಹ್ವಾನ ನೀಡಲಾಗಿದೆ.

ನಿಯೋಜಿತ ಸಿಎಂ ಡಿ.ಕೆ. ಶಿವಕುಮಾರ್ ಸೂಚನೆ ಮೇರೆಗೆ ಸರ್ಕಾರದಿಂದಲೇ ಅಧಿಕೃತ ಆಹ್ವಾನ ಕಳುಹಿಸಲಾಗಿದೆ. ಆದಿಚುಂಚನಗಿರಿ ನಿರ್ಮಲಾನಂದನಾಥ ಸ್ವಾಮೀಜಿ, ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ದಗಂಗೆ ಸಿದ್ಧಲಿಂಗ ಸ್ವಾಮೀಜಿ, ನಂಜಾವಧೂತ ಸ್ವಾಮೀಜಿ, ನೊಣವಿನಕೆರೆ ಕರಿವೃಷಭ ದೇಶಿಕೇಂದ್ರ ಶಿವಯೋಗಿ ಸ್ವಾಮೀಜಿ, ವಚನಾನಂದ ಸ್ವಾಮೀಜಿ ಆನಂದ ಬಿಕ್ಕು, ಆರ್ಚಬಿಷಪ್ ಡಾ.ಪೀಟರ್ ಮಚಾಡೋ, ಹಜರತ್ ಹಫೀಜ್ ಡಾ.ಸೈಯದ್ ಮೊಹಮ್ಮದ್ ಅಲಿ ಅಲ್ ಹುಸೈನ್ ಸೇರಿದಂತೆ ಸರ್ವಧರ್ಮದ ಶ್ರೀಗಳಿಗೆ ಆಹ್ವಾನ ನೀಡಲಾಗಿದೆ.

## ಮಾಜಿ ಎಂಎಲ್ಸಿ ಅಪಹರಣ: 3 ಕೋಟಿ ಹಣಕ್ಕೆ ಬೇಡಿಕೆ

**ಆನೇಕಲ್:** ವಿಧಾನ ಪರಿಷತ್ ಮಾಜಿ ಸದಸ್ಯ ದಯಾನಂದ ರೆಡ್ಡಿ ಅವರನ್ನು ಅಪಹರಿಸಿ 3 ಕೋಟಿ ಹಣಕ್ಕೆ ಬೇಡಿಕೆ ಇಟ್ಟಿರುವ ಘಟನೆ ಸೋಮವಾರ ತಡರಾತ್ರಿ ಆನೇಕಲ್ ಬಳಿ ನಡೆದಿದೆ.

ನಿನ್ನೆ ತಡರಾತ್ರಿ 12:15ರ ಸುಮಾರಿಗೆ ಗೋಲ್ಡ್ ಕಾಯಿನ್ ಕ್ಲಬ್‌ನಿಂದ ಹೊರಟಿದ್ದ ಮಾಜಿ ಎಂಎಲ್‌ಸಿ ದಯಾನಂದರೆಡ್ಡಿ ಕಾರನ್ನು ಹಿಲಲಿಗೆ ಗ್ರಾಮದ ಸಮೀಪ ಬೈಕ್‌ನಲ್ಲಿ ಬಂದ ಇಬ್ಬರು ಅಡ್ಡಗಟ್ಟಿದ್ದಾರೆ. ನಿಮಗೆ ಗಿಫ್ಟ್ ಬಂದಿದೆ ಎಂದು ಹೇಳಿ ಕಾಟನ್ ಬಾಕ್ಸ್ ತೋರಿಸಿದ್ದಾರೆ. ಕಾರಿನ ಡೋರ್ ಲಾಕ್ ತೆರೆದ ತಕ್ಷಣ ಒಬ್ಬ ವ್ಯಕ್ತಿ ಕಾರಿನೊಳಗೆ ನುಗ್ಗಿದ್ದಾನೆ. ಬಳಿಕ ಗನ್ ತೋರಿಸಿ ತಾನು ಹೇಳಿದ ಕಡೆಗೆ ಕಾರು ಚಲಾಯಿಸುವಂತೆ ಸೂಚಿಸಿದ್ದಾನೆ.

ಈ ವೇಳೆ ಕೆಂಪು ಬಣ್ಣದ ಕಾರಿನಲ್ಲಿ ಮತ್ತಿಬ್ಬರು ಹಿಂಬಾಲಿಸಿದ್ದಾರೆ. ಬಳಿಕ ಅತ್ತಿಬೆಲೆ ಕೆಎಚ್‌ಬಿ ಬಡಾವಣೆ ಸಮೀಪ ಕರೆದೊಯ್ದು ಬೆದರಿಕೆ ಹಾಕಲಾಗಿದೆ. ನಿನ್ನನ್ನು ಕೊಲ್ಲಲು 10 ಕೋಟಿ ರೂ. ಸುಪಾರಿ ನೀಡಿದ್ದಾರೆ ಎಂದು ಹೇಳಿ ಕುತ್ತಿಗೆಗೆ ಗನ್ ಇಟ್ಟು ಜೀವ ಬೆದರಿಕೆ ಹಾಕಿದ್ದಾರೆ ಎಂದು ದೂರು ದಾಖಲಾಗಿದೆ.

## ವಿಧಾನಸೌಧ ಸಮೀಪದ ಕಚೇರಿಗೆ ಅರ್ಧ ದಿನ ರಜೆ

**ಬೆಂಗಳೂರು:** ನಿಯೋಜಿತ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪದಗ್ರಹಣ ಸಮಾರಂಭದ ಹಿನ್ನೆಲೆಯಲ್ಲಿ ವಿಧಾನಸೌಧ, ವಿಕಾಸಸೌಧ ಮತ್ತು ಬಹುಮಹಡಿ ಕಟ್ಟಡದ ಸರ್ಕಾರಿ ನೌಕರರಿಗೆ ಜೂನ್ 3ರಂದು ಅರ್ಧ ದಿನ ರಜೆ ಘೋಷಿಸಲಾಗಿದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಹೊರಡಿಸಿದ ಅಧಿಸೂಚನೆ ಪ್ರಕಾರ, ಜೂನ್ 3 ರಂದು ಸಂಜೆ 4.05ಕ್ಕೆ ವಿಧಾನಸೌಧದ ಆವರಣದಲ್ಲಿ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಯಲಿದೆ. ಭದ್ರತಾ ವ್ಯವಸ್ಥೆ, ಸಂಚಾರ ನಿರ್ವಹಣೆ ಮತ್ತು ಸಮಾರಂಭದ ಸುಗಮ ನಿರ್ವಹಣೆಗೆ ಅನುಕೂಲವಾಗುವಂತೆ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಸರ್ಕಾರ ತಿಳಿಸಿದೆ.

ವಿಧಾನಸೌಧದ ಆವರಣದಲ್ಲಿ ಮತ್ತು ಸುತ್ತಮುತ್ತ ಭಾರಿ ವಾಹನಗಳ ಸಂಚಾರ ಮತ್ತು ಜನದಟ್ಟಣೆ ಉಂಟಾಗಬಹುದು ಎಂದು ನಿರೀಕ್ಷಿಸಲಾಗಿದೆ. ಹೀಗಾಗಿ ಜೂನ್ 3ರಂದು ಮಧ್ಯಾಹ್ನ ವಿಧಾನಸಭೆ ಮತ್ತು ವಿಧಾನಸೌಧದ ಸುತ್ತಮುತ್ತಲಿನ ಸರ್ಕಾರಿ ಕಚೇರಿಗಳು ಮುಚ್ಚಲ್ಪಡುತ್ತವೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

## ಅರ್‌ಸಿಬಿಗೆ ಐಪಿಎಲ್ ಟ್ರೋಫಿ: ಮಕ್ಕಳಿಗೆ ನೋಟ್ ವಿತರಣೆ



**ಚಾಮರಾಜನಗರ:** ಐಪಿಎಲ್ ಟೂರ್ನಿಯಲ್ಲಿ ಬೆಂಗಳೂರು ರಾಯಲ್ ಚಾಲೆಂಜರ್ ಸತತ ಎರಡನೇ ಬಾರಿಗೆ ಟ್ರೋಪಿಮುಡಿಗೇರಿಸಿಕೊಂಡ ಹಿನ್ನೆಲೆಯಲ್ಲಿ ಅರ್ ಸಿಬಿ ಅಭಿಮಾನಿಗಳು, ತಾಲ್ಲೂಕಿನ ಕೋಡಿಮೋಳೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ನೋಟ್ ಬುಕ್, ಲೇಖನಿ ಸಾಮಾಗ್ರಿ ವಿತರಣೆ ಮಾಡುವ ಮೂಲಕ ಬೆಂಗಳೂರು ರಾಯಲ್ ಚಾಲೆಂಜರ್ ಗೆಲುವನ್ನು ಸಂಭ್ರಮಿಸಿದರು.

ಇದೇವೇಳೆ ಶಾಲಾ ಮುಖ್ಯ ಶಿಕ್ಷಕಿ ರತ್ನಮ್ಮ ಮಾತನಾಡಿ. ವಿದ್ಯಾರ್ಥಿಗಳು ಓದಿನ ಜತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿ, ಸಾಧನೆ ಮಾಡುವ ಮೂಲಕ ನಮ್ಮ ಜಿಲ್ಲೆಗೆ ಕೀರ್ತಿ ತರಬೇಕು ಎಂದರು

ಈ ಸಂಧರ್ಭದಲ್ಕಿ ಸಿಆರ್‌ಪಿ ಹೇಮಾ, ಸಹಶಿಕ್ಷಕರು, ಭಗತ್ ಸಿಂಗ್ ಯುವಸೇನೆ ಅಧ್ಯಕ್ಷ ಕಾಂತರಾಜ್, ಮಣಿ, ರಂಗಸ್ವಾಮಿ. ಮಹೇಶ್, ದೊರೆಸ್ವಾಮಿ. ರವಿ. ವಿಷಕಂಠ, ಪ್ರಸಾದ್ ಸೇರಿದಂತೆ ಒಂದರಿಂದ ಮೂರನೇ ತರಗತಿ ವಿದ್ಯಾರ್ಥಿಗಳು ಹಾಜರಿದ್ದರು.

## ಸತೀಶ ಜಾರಕಿಹೊಳಿಗೆ ಡಿಸಿಎಂ ನೀಡಲು ನಾಯಕ ಸಮಾಜದ ಮುಖಂಡರ ಒತ್ತಾಯ



**ಚಾಮರಾಜನಗರ:** ಮಾಜಿ ಸಚಿವ ಸತೀಶ್ ಜಾರಕಿಹೊಳಿ ಅವರಿಗೆ ಉಪಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷ ಸ್ಥಾನ, ಜಿಪಂ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು ಅವರಿಗೆ ವಿಧಾನ ಪರಿಷತ್ ಸದಸ್ಯ ಸ್ಥಾನ ನೀಡಬೇಕು ಎಂದು ಕಾಂಗ್ರೆಸ್ ನಾಯಕ ಸಮಾಜದ ಮುಖಂಡರು ಒತ್ತಾಯಿಸಿದರು.


ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ವಿ.ಚಂದ್ರು ಮಾತನಾಡಿ, ಕಾಂಗ್ರೆಸ್ ನಾಯಕರಲ್ಲಿ ಒಬ್ಬರಾದ ಸತೀಶ ಜಾರಕಿಹೊಳಿ ಅವರಿಗೆ ಡಿಸಿಎಂ ಜೊತೆಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ನೀಡಬೇಕು ಎಂಬುದು ಸಮುದಾಯದಜನರ ಒತ್ತಾಸೆಯಾಗಿದೆ ಎಂದು ಹೇಳಿದರು.

2006ರ ಹುಬ್ಬಳ್ಳಿ ಅಹಿಂದ ಸಮಾವೇಶದ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಸತೀಶ್ ಜಾರಕಿಹೊಳಿ ಅವರು ಅಂದಿನಿಂದ ಇಂದಿನವರೆಗೂ ಕಾಂಗ್ರೆಸ್ ಪಕ್ಷದ ಬಲವರ್ಧನೆಗೆ ನಿರಂತರವಾಗಿ ಶ್ರಮಿಸಿದ್ದಾರೆ ಎಂದು ಹೇಳಿದರು.

ಮೈಸೂರಿನ ಚಾಮುಂಡೇಶ್ವರಿ ಹಾಗೂ ಬಾದಾಮಿ ಉಪಚುನಾವಣೆಯಲ್ಲಿ ಸಿದ್ದರಾಮಯ್ಯ ಅವರನ್ನು ಗೆಲ್ಲಿಸುವಲ್ಲಿ ಪ್ರಮುಖಪಾತ್ರ ವಹಿಸಿಸ್ದರು ಅಲ್ಲದೇ ಲೋಕಸಭಾ ಚುನಾವಣೆಯಲ್ಲಿ ಘಟಾನುಘಟಿ ನಾಯಕರೊಂದಿಗೆ ಚುನಾವಣೆ ಎದುರಿಸಿ ತಮ್ಮ ಮಗಳನ್ನು ಗೆಲ್ಲಿಸುವ ಮೂಲಕ ಕಾಂಗ್ರೆಸ್ ಗೆ ವರ್ಚಸ್ಸನ್ನು ತಂದುಕೊಟ್ಟಿದ್ದಾರೆ ಎಂದು ತಿಳಿಸಿದರು. ಮೈಸೂರು ಭಾಗದ ನಾಯಕ ಸಮುದಾಯದ ಮುಖಂಡರಲ್ಲಿ ಒಬ್ಬರಾದ

ಜಿ.ಪಂ.ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು ಅವರಿಗೆ ವಿಧಾನ ಪರಿಷತ್ ಸ್ಥಾನ ನೀಡಲು ಪಕ್ಷದ ವರಿಷ್ಠರು ನಿರ್ಧಾರ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಪತ್ರಿಕಾಗೋಷ್ಠಿಯಲ್ಲಿ ಜಿ.ಪಂ.ಮಾಜಿ ಸದಸ್ಯರಾದ ಎಸ್.ಸೋಮನಾಯಕ, ಕೊಪ್ಪಾಳಿಮಹದೇವನಾಯಕ, ಯಳಂದೂರು ತಾ.ಪಂ.ಮಾಜಿ ಅಧ್ಯಕ್ಷ ವೆಂಕಟೇಶ್ ನಾಯಕ, ಗುಂಡ್ಲುಪೇಟೆ ತಾ.ಪಂ.ಮಾಜಿ ಉಪಾಧ್ಯಕ್ಷ ಬಂಗಾರನಾಯಕ, ಯಳಂದೂರು ಟೌನ್ ಪಂಚಾಯತಿ ಮಾಜಿ ಅಧ್ಯಕ್ಷ ಮಹೇಶ್, ಕೊಳ್ಳೇಗಾಲ ನಗರಸಭಾ ಮಾಜಿ ಉಪಾಧ್ಯಕ್ಷ ಸುರೇಶ್, ಸಾಗಡೆ ನಂಜುಂಡನಾಯಕ ಹಾಜರಿದ್ದರು.

# ಜಿಲ್ಲೆಯಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ: ಡಿಸಿ ಶ್ರೀರೂಪ



**ಚಾಮರಾಜನಗರ:** ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯನ್ನು (ಎಸ್.ಐ.ಆರ್) ಜಿಲ್ಲೆಯಲ್ಲೂ ಕೈಗೊಳ್ಳಲಾಗುತ್ತಿದ್ದು, ಇದಕ್ಕಾಗಿ ಈಗಾಗಲೇ ವೇಳಾ ಪಟ್ಟಿ ಪ್ರಕಟಿಸಲಾಗಿದೆ ಎಂದು ಜಿಲ್ಲಾಧಿಕಾರಿ ಶ್ರೀರೂಪ ಅವರು ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಸಂಬಂಧ ಮಾಧ್ಯಮ ಪ್ರತಿನಿಧಿಗಳಿಗೆ ಹಮ್ಮಿಕೊಳ್ಳಲಾಗಿದ್ದ ಕಾರ್ಯಾಗಾರ ಹಾಗೂ ಪತ್ರಿಕಾಗೋಷ್ಠಿ ಉದ್ದೇಶಿಸಿ ಅವರು ಮಾತನಾಡಿದರು.

ಮತದಾರರ ಪಟ್ಟಿ ಸಿದ್ಧಪಡಿಸುವಿಕೆಯಲ್ಲಿ ಮತದಾರರ ಪಟ್ಟಿಯಲ್ಲಿ ಎಲ್ಲ ಅರ್ಹ ನಾಗರಿಕರು ಸೇರ್ಪಡೆಗೊಂಡಿರುವುದನ್ನು ಹಾಗೂ ಅರ್ಹರು ಮತದಾರರ ಪಟ್ಟಿಯಿಂದ ಕೈಬಿಡದಿರುವುದನ್ನು ಖಚಿತಪಡಿಸಿಕೊಳ್ಳಲು, ಮುಕ್ತ, ನಿಷ್ಪಕ್ಷಪಾತ ಚುನಾವಣೆ ನಡೆಸಲು ಮತದಾರರ ಪಟ್ಟಿಯ ವಿಶ್ವಾರ್ಹತೆಯನ್ನು ಕಾಪಾಡಿಕೊಳ್ಳುವುದು ಅತ್ಯಂತ ಅಗತ್ಯವಾಗಿರುವ ಹಿನ್ನೆಲೆಯಲ್ಲಿ ಚುನಾವಣಾ ಆಯೋಗವು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ನಡೆಸುತ್ತಿದೆ ಎಂದರು.

ದಿನಾಂಕ 01–10–2026 ಅನ್ನು ಅರ್ಹತಾ ದಿನಾಂಕ ಎಂದು ಪರಿಗಣಿಸಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯವನ್ನು ಕೈಗೊಳ್ಳಲಾಗುತ್ತದೆ. ಜೂನ್ 20 ರಿಂದ 29ರವರೆಗೆ ತಯಾರಿ ತರಬೇತಿ, ನಮೂನೆ ಮುದ್ರಣ ಕಾರ್ಯ ನಡೆಯಲಿದೆ. ಜೂನ್ 30 ರಿಂದ ಜುಲೈ 29ರವರೆಗೆ ಬೂತ್ ಮಟ್ಟದ ಅಧಿಕಾರಿಗಳು (ಬಿ.ಎಲ್.ಒ) ಮನೆ ಮನೆಗೆ ಭೇಟಿ ನೀಡಲಿದ್ದಾರೆ. ಮತಗಟ್ಟೆಗಳ ಪುನರ್ ವಿಂಗಡಣೆ ಜುಲೈ 29ರೊಳಗೆ ನಡೆಯಲಿದೆ. ಕರಡು ಮತದಾರರ ಪಟ್ಟಿಯನ್ನು ಆಗಸ್ಟ್ 5ರಂದು ಪ್ರಕಟಿಸಲಾಗುತ್ತದೆ. ಆಗಸ್ಟ್ 5 ರಿಂದ ಸೆಪ್ಟೆಂಬರ್ 4ರವರೆಗೆ ಹಕ್ಕು ಆಕ್ಷೇಪಣೆಗಳ ಸಲ್ಲಿಕೆಗೆ ಅವಕಾಶವಿದೆ. ಆಗಸ್ಟ್ 5 ರಿಂದ ಅಕ್ಟೋಬರ್ 3ರವರೆಗೆ ಹಕ್ಕು ಆಕ್ಷೇಪಣೆಗಳನ್ನು ವಿಲೇವಾರಿ ಮಾಡಲಾಗುತ್ತದೆ. ಅಕ್ಟೋಬರ್ 7ರಂದು ಅಂತಿಮ ಮತದಾರರ ಪಟ್ಟಿ ಪ್ರಕಟಿಸಲಾಗುತ್ತದೆ ಎಂದು ಜಿಲ್ಲಾಧಿಕಾರಿಯವರು ವಿವರಿಸಿದರು.

ಜಿಲ್ಲೆಯಲ್ಲಿ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಗಾಗಿ 983 ಬೂತ್ ಮಟ್ಟದ ಅಧಿಕಾರಿಗಳು ಭಾಗವಹಿಸಲಿದ್ದಾರೆ. ದಿನಾಂಕ 01–06–2026ಕ್ಕೆ 8,79,752 ಮತದಾರರಿದ್ದು, ವಿಶೇಷ ಸಮಗ್ರ ಪರಿಷ್ಕರಣೆಯು ಎಲ್ಲ ಮತದಾರರನ್ನು ಒಳಗೊಳ್ಳಲಿದೆ. ಈವರೆಗೆ ಜಿಲ್ಲೆಯಲ್ಲಿ ಶೇ. 96.88ರಷ್ಟು ಮತದಾರರನ್ನು ಮ್ಯಾಪಿಂಗ್ ಮಾಡಲಾಗಿದೆ. ಆಯೋಗದ ಮಾರ್ಗಸೂಚಿಗಳಿಗನುಗುಣವಾಗಿ ಪರಿಷ್ಕರಣಾ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಮತ್ತು ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು ಎಲ್ಲ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳು ಪ್ರತಿ ಮತಗಟ್ಟೆಗೆ ಬೂತ್ ಮಟ್ಟದ ಏಜೆಂಟರನ್ನು ನೇಮಿಸಲು ಕೋರಲಾಗಿದೆ ಎಂದು ತಿಳಿಸಿದರು.

ಮತದಾರರು ಭಾರತದ ನಾಗರಿಕರಾಗಿದ್ದು, ಕನಿಷ್ಠ 18 ವರ್ಷ ವಯಸ್ಸಾಗಿರಬೇಕು. ಕ್ಷೇತ್ರದ ಸಾಮಾನ್ಯ ನಿವಾಸಿಯಾಗಿದ್ದು, ಯಾವುದೇ ಕಾನೂನಿನಡಿಯಲ್ಲಿ ಅನರ್ಹಗೊಂಡಿರಬಾರದು. ಚುನಾವಣೆಗಳಿಗೆ ಮತದಾರರ ಪಟ್ಟಿಯ ಸಮಗ್ರತೆಯನ್ನ ಕಾಪಾಡಿಕೊಳ್ಳುವುದು ಮೂಲಭೂತವಾಗಿದೆ. ಮತದಾರರ ಪಟ್ಟಿಗಳಲ್ಲಿ ಗಮನಾರ್ಹ ಬದಲಾವಣೆಗಳು ಪುನರಾವರ್ತಿತ ನಮೂದುಗಳ ಸಾಧ್ಯತೆ, ಇನ್ನಿತರ ಕಾರಣಗಳಿಂದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕೈಗೊಳ್ಳಲಾಗಿದೆ ಎಂದರು.

ಬಿ.ಎಲ್.ಒ ಗಳು ಪ್ರತಿ ಮತದಾರರಿಗೆ ನಕಲು ಪ್ರತಿಗಳಲ್ಲಿ ಗಣತಿ ನಮೂನೆ (ಎನ್ಯುಮಿರೇಶನ್ ಫಾರ್ಮ್) ಮತದಾರರಿಗೆ ವಿತರಿಸಲಿದ್ದಾರೆ. ಎರಡನೇ ಭೇಟಿಯಲ್ಲಿ ಬಿ.ಎಲ್.ಒ ಭರ್ತಿ ಮಾಡಿದ ಫಾರಂ ಅನ್ನು ಸಂಗ್ರಹಿಸಿ ಮತ್ತೊಂದು ಫಾರಂ ಅನ್ನು ಸ್ವೀಕೃತಿಯಾಗಿ ಮತದಾರರಿಗೆ ನೀಡುತ್ತಾರೆ. ಮತದಾರರು ಹಿಂದಿನ ಎಸ್.ಐ.ಆರ್ ನ ಮತದಾರರ ಪಟ್ಟಿಯಲ್ಲಿ ತಮ್ಮ ವಿವರಗಳನ್ನು ಒದಗಿಸಬೇಕು. ಹಿಂದಿನ ಎಸ್.ಐ.ಆರ್ ನ ಮಾಹಿತಿಯನ್ನು https://voters.eci.gov.in ರಲ್ಲಿ ಪಡೆಯಬಹುದು. ಬಿ.ಎಲ್.ಒ ರವರು ಫಾರಂ ಸಂಗ್ರಹಿಸಲು ಮೂರು ಬಾರಿ ಭೇಟಿ ಮಾಡಲಿದ್ದಾರೆ. ಮನೆ ಲಾಕ್ ಆಗಿದ್ದರೆ ಫಾರಂ ಅನ್ನು ಮನೆಗೆ ಅಂಟಿಸಲಾಗುತ್ತದೆ. ಫಾರಂಗಳನ್ನು ಸ್ವೀಕರಿಸದಿದ್ದಲ್ಲಿ ಮತದಾರರನ್ನು ಪಟ್ಟಿಗೆ ಸೇರಿಸಲಾಗುವುದಿಲ್ಲ. ಹೊಸ ಮತದಾರರು ಘೋಷಣೆ ನಮೂನೆಯೊಂದಿಗೆ (ಡಿಕ್ಲರೇಶನ್ ಫಾರಂ) ನಮೂನೆ 6ರನ್ನು ಸಲ್ಲಿಸಬೇಕು ಜಿಲ್ಲಾಧಿಕಾರಿಯವರು ವಿವರಿಸಿದರು.

ಎನ್ಯುಮಿರೇಶನ್ ಫಾರ್ಮ್ ಅನ್ನು ಭರ್ತಿ ಮಾಡಿ ಸಲ್ಲಿಸಿದ ಪ್ರತಿಯೊಬ್ಬ ಮತದಾರರನ್ನು ಕರಡು ಮತದಾರರ ಪಟ್ಟಿಗೆ ಸೇರಿಸಲಾಗುತ್ತದೆ. ಕರಡು ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಹಕ್ಕು ಆಕ್ಷೇಪಣೆಗಳನ್ನು ಆಹ್ವಾನಿಸಲಾಗುತ್ತದೆ. ಸೇರ್ಪಡೆಗಾಗಿ ಫಾರಂ 6, 8ರಲ್ಲಿ ಮತ್ತು ಹೊರಗಿಡುವಿಕೆ, ಅಳಿಸುವಿಕೆ ಆಕ್ಷೇಪಣೆಗಳನ್ನು ಫಾರಂ 7ರಲ್ಲಿ ಸಲ್ಲಿಸಬೇಕಾಗುತ್ತದೆ ಎಂದು ಜಿಲ್ಲಾಧಿಕಾರಿ ಶ್ರೀರೂಪ ಅವರು ತಿಳಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಉಪವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ ಇದ್ದರು.

## ಬೀಡಿ ಕಾಲೋನಿಯಲ್ಲಿ ಕೆಪಿಎಸ್ ಮಾದರಿ ಪಬ್ಲಿಕ್ ಶಾಲೆ ಉದ್ಘಾಟನೆ



**ಚಾಮರಾಜನಗರ:** ರಾಜ್ಯಸರ್ಕಾರ ಮಕ್ಕಳ ಶಿಕ್ಷಣಕ್ಕೆ ಕೋಟ್ಯಂತರ ರೂ.ವೆಚ್ಚ ಮಾಡುತ್ತಿದ್ದು, ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ದಾಖಲಿಸಿ, ಗುಣಮಟ್ಟದ ಶಿಕ್ಷಣ ಕೊಡಿಸಬೇಕು ಎಂದು ಚಾಮರಾಜನಗರ ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರ (ಚುಡಾ) ಅಧ್ಯಕ್ಷ ಮಹಮದ್ ಅಸ್ಗರ್(ಮುನ್ನಾ) ಸಲಹೆ ನೀಡಿದರು.

ನಗರಸಭೆ ವ್ಯಾಪ್ತಿಯ ಗಾಳೀಪುರ ಬಡಾವಣೆಯ ಬೀಡಿಕಾಲೋನಿಯಲ್ಲಿ ಕೆಪಿಎಸ್ ಮಾದರಿಯ ಮೌಲಾನಾ ಆಜಾದ್ ಪಬ್ಲಿಕ್ ಶಾಲಾರಂಭ ಕಾರ್ಯಕ್ರಮವನ್ನು ಗಿಡಕ್ಕೆ ನೀರಾಕುವುದರ ಮೂಲಕ ಉದ್ಘಾಟಿಸಿ ಮಾತನಾಡಿದರು.

ಜಿಲ್ಲೆಯಲ್ಲೇ ಪ್ರಥಮಬಾರಿಗೆ ಉರ್ದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮೌಲಾನಾ ಆಜಾದ್ ಪಬ್ಲಿಕ್ ಶಾಲೆ ಆರಂಭವಾಗುತ್ತಿದೆ, ಎಕೆಜಿಯಿಂದ 8 ನೇ ತರಗತಿಯವರಗೆ ಶಿಕ್ಷಣ ನೀಡಲಾಗುತ್ತದೆ, ಶಾಲೆಯಲ್ಲಿ ನುರಿತ ಶಿಕ್ಷಕರಿಂದ ಗುಣಮಟ್ಟದ ಬೋಧನೆ ಮಕ್ಕಳಿಗೆ ಸಿಗಲಿ ಉರ್ದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕೆಪಿಎಸ್ ಮಾದರಿಯ ಮೌಲಾನಾ ಆಜಾದ್ ಪಬ್ಲಿಕ್ ಶಾಲೆ ಆರಂಭಿಸುವಂತೆ ಶಾಸಕರು ಹಾಗೂ ತಾವು ಕೆಡಿಪಿ ಸಭೆಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಗಮನ ಸೆಳೆದಿದ್ದೆವು, ಆ ಒಂದು ಶ್ರಮದ ಫಲವೆ ಕೆಪಿಎಸ್ ಮಾದರಿಯ ಮೌಲಾನಾ ಆಜಾದ್ ಪಬ್ಲಿಕ್ ಶಾಲೆ ಮಂಜೂರಾಯಿತು ಎಂದರು.

ಈ ಸಂದರ್ಭದಲ್ಲಿ ಪ್ರಾಥಮಿಕ ಶಾಲಾಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಮಹದೇವಸ್ವಾಮಿ, ಪ್ರಾಥಮಿಕ ಶಾಲಾಶಿಕ್ಷಕರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ,ಕೆ.ಎಸ್.ಮಾದಪ್ಪ, ತಾಲ್ಲೂಕು ಅಧ್ಯಕ್ಷ ಸಿ.ಕೆ.ರಾಮಸ್ವಾಮಿ, ಬಿ,ಆರ್,ಸಿ ರಾಜೀವ್, ಬಿಐಇಆಟಿ ರೆಬೆಲ್, ಮಾಜಿ ನಗರಸಭಾ ಸದಸ್ಯ ಕಲೀಲ್ ಉಲ್ಲಾ. ಎಡಿಎಂಸಿ ಅಧ್ಯಕ್ಷೆ ಯೊಸ್ಮಿನ್,ತಾಜ್, ಮುಖ್ಯಶಿಕ್ಷಕಿ ಅಜೀರಾಬೇಗಂ, ಬಿಆಸಿ ಶಿಕ್ಷಕ ಎಂ,ಮುರುಗೇಕುಮಾರ್, ಸೇರಿದಂತೆ ಶಿಕ್ಷರ ವೃಂದ, ಪೋಷಕರು, ಸಿಆಪಿ, ಬಿಆಪಿ, ಬಡಾವಣೆ ನಿವಾಸಿಗಳು ಹಾಜರಿದ್ದರು,

## ಚಾ.ನಗರ ಜಿಲ್ಲೆಯ ಶಾಸಕರಿಗೆ ಸಚಿವ ಸ್ಥಾನ ನೀಡುವಂತೆ ಆಗ್ರಹಿಸಿ ಪ್ರತಿಭಟನೆ



**ಚಾಮರಾಜನಗರ:** ಜಿಲ್ಲೆಯ ಶಾಸಕರಿಗೆ ಸಚಿವ ಸ್ಥಾನ ನೀಡುವಂತೆ ಒತ್ತಾಯಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಭುವನೇಶ್ವರಿ ವೃತ್ತದಲ್ಲಿ ಕರ್ನಾಟಕ ಸೇನಾಪಡೆಯ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ಕನ್ನಡ ಧ್ವಜ ಹಿಡಿದು ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಕರ್ನಾಟಕ ರಾಜ್ಯದ ಗಡಿಪ್ರದೇಶವಾದ ಚಾಮರಾಜನಗರ ಜಿಲ್ಲೆಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಹಚಿವ ಸಂಪುಟದಲ್ಲಿ ಜಿಲ್ಲೆಯ ಶಾಸಕರುಗಳಿಗೆ ಮಂತ್ರಿ ಸ್ಥಾನ ನೀಡುವಂತೆ ಒತ್ತಾಯಿಸಿದರು.

ನೂತನ ಸಚಿವ ಸಂಪುಟದಲ್ಲಿ ನಮ್ಮ ಜಿಲ್ಲೆಗೆ ಪ್ರಾತಿನಿಧ್ಯತೆ. ನೀಡಬೇಕು. ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಸತತವಾಗಿ 4 ಬಾರಿ ಗೆದ್ದಿರುವ ಸರಳ, ಸಜ್ಜನಿಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಇದ್ದಾರೆ ಅವರು ಹಿಂದುಳಿದ ವರ್ಗಗಳ ಉಪ್ಪಾರ ಸಮುದಾಯದ ಏಕೈಕ ಶಾಸಕರಾಗಿದ್ದಾರೆ. ಅಲ್ಲದೆ ಮಾಜಿ ರಾಜ್ಯಪಾಲ ಬಿ.ರಾಚಯ್ಯ ಅವರ ಸುಪುತ್ರರು, 3 ಬಾರಿ ಶಾಸಕರಾಗಿರುವ ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಶಾಸಕ ಎ.ಆರ್. ಕೃಷ್ಣಮೂರ್ತಿ ಇದ್ದಾರೆ. ಗುಂಡ್ಲುಪೇಟೆ ವಿಧಾನ ಸಭಾ ಕ್ಷೇತ್ರದಿಂದ ಮಾಜಿ ಸಚಿವರಾದ ದಿವಂಗತ ಹೆಚ್.ಎಸ್.ಮಹದೇವಪ್ಪ ಅವರ ಸುಪುತ್ರ, ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಅವರ ಮೂವರಲ್ಲಿ ಅವರ ಹಿರಿತನ, ಅನುಭವವನ್ನು ಪರಿಗಣಿಸಿ ಜಿಲ್ಲೆಗೆ ಸಚಿವ ಸ್ಥಾನ ನೀಡಬೇಕು ಎಂದು ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕಾಂಗ್ರೆಸ್ ವರಿಷ್ಠರನ್ನು ಒತ್ತಾಯಿಸಿದರು.

ಕಂಡಕ್ಟರ್ ಸೋಮನಾಯಕ, ಪಣ್ಯದಹುಂಡಿ ರಾಜು, ನಿಜಧ್ವನಿಗೋವಿಂದರಾಜು, ಜಗದೀಶ್, ಅರುಣ್ ಕುಮಾರ್ ಗೌಡ, ಹೊಂಗನೂರು ಕೆಂಪರಾಜು, ರವಿಚಂದ್ರಪ್ರಸಾದ್ ಕಹಳೆ, ರಾಚಪ್ಪ, ಅಮಚವಾಡಿ ರಾಜು, ಶಿವು, ಮುತ್ತಿಗೆ ಗೋವಿಂದರಾಜು, ಚಾ.ಸಿ.ಸಿದ್ದರಾಜು ಭಾಗವಹಿಸಿದ್ದರು.

### ಸರಕು ಸಾಗಾಣಕೆ ದುಬಾರಿ

## ಡಿಸೇಲ್ ತೆರಿಗೆ, ರಸ್ತೆ ಟೋಲ್ ಶುಲ್ಕ ಇಳಿಸಿ ವಿನಾಯಿತಿಗೆ ಒತ್ತಾಯ



**ಚಾಮರಾಜನಗರ:** ರಾಜ್ಯ ಹಾಗು ಕೇಂದ್ರ ಸರಕಾರಗಳು ಡೀಸೆಲ್ ಮೇಲೆ ವಿಧಿಸುತ್ತಿರುವ ತೆರಿಗೆಗಳನ್ನು ಕೂಡಲೆ ಇಳಿಸಬೇಕು. ರಸ್ತೆ ಟೋಲ್ ಶುಲ್ಕದಿಂದ ಸರಕು ವಾಹನಗಳಿಗೆ ವಿನಾಯಿತಿ ನೀಡಬೇಕೆಂದು ಎಂದು ಒತ್ತಾಯಿಸಿ ಚಾಮರಾಜನಗರ ಲೋಕಲ್ ಲಾರಿ ಓನರ್ ಅಸೋಸಿಯೇಷನ್, ಲಾರಿ ಓನರ್ ಆಸೋಷಿಯೇಷನ್, ಚಾ.ನಗರ ಟೇಪೋ ಮಾಲೀಕರ ಸಂಘದಿಂದ ಅಪರ ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ನಗರದ ಜಿಲ್ಲಾಡಳಿತ ಭವನದ ಮುಂದೆ ಜಮಾಯಿಸಿದ ಲಾರಿ ಮಾಲೀಕರು ಹಾಗೂ ಚಾಲಕರು ಕೇಂದ್ರ ಹಾಗು ರಾಜ್ಯ ಸರ್ಕಾರಗಳ ತೆರಿಗೆ ಭಾರವನ್ನು ಇಳಿಸಬೇಕು. ಇಂಧನ ದರ ಇಳಿಸಬೇಕು, ಸರಕು ಸಾಗಾಣ ಕೆ ವಾಹನಗಳಿಗೆ ವಿನಾಯಿತಿ ನೀಡಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅಸೋಷಿಯನ್ ಸಂಘದ ಅಧ್ಯಕ್ಷ ನಾರಾಯಣ ಪ್ರಸಾದ್, ಇಂಧನ, ರಸ್ತೆ ಟೋಲ್ ಶುಲ್ಕ, ಟೈಗಳ ಬೆಲೆ ಹೆಚ್ಚಳ, ಫಿಟ್ನೆಸ್ ಶುಲ್ಕ ಹೆಚ್ಚಳದಿಂದ ಸರಕು ಸಾಗಾಣ ಕೆ ವಾಹನದ ಮಾಲೀಕರಿಗೆ ಆಗುತ್ತಿರುವ ಸಮಸ್ಯೆಗಳ ಸರ್ಕಾರಗಳು ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ಕಳೆದ ತಿಂಗಳಿನಲ್ಲಿ ಡೀಸೆಲ್ ಬೆಲೆಯಲ್ಲಿ ಪ್ರತಿ ಲೀಟರ್‌ಗೆ ಸರಿ ಸುಮಾರು 8 ರೂಗಳ ಹೆಚ್ಚಳವಾಗಿರುತ್ತದೆ. ಇದಲ್ಲದೆ ಸರಕಾರವು ವಾಹನಗಳ ಫಿನೆಸ್ ಶುಲ್ಕವನ್ನು ಅತಿಯಾಗಿ ಏರಿಕೆ ಮಾಡಿರುತ್ತದೆ. ಟೈರ್ ಮತ್ತು ಬಿಡಿ ಭಾಗಗಳ ಬೆಲೆಯಲ್ಲೂ ಗಣನೀಯವಾಗಿ ಹೆಚ್ಚಾಗಿದೆ. ಇದರಿಂದ ಸರಕು ಸಾಗಾಣ ಕೆ ವಾಹನಗಳ ನಿರ್ವಹಣಾ ವೆಚ್ಚ ಗಣನೀಯವಾಗಿ ಹೆಚ್ಚಳವಾಗಿದೆ ಎಂದರು.

ಆದರೆ ಹೆಚ್ಚಾಗಿರುವ ವೆಚ್ಚವನ್ನು ಬಾಡಿಗೆ ಹೆಚ್ಚಿಸಿ ಪಡೆಯುವ ಪರಿಸ್ಥಿತಿ ಸರಕು ಸಾಗಾಣ ಕೆ ವಾಹನ ಮಾಲೀಕರಿಗೆ ಅಸಾಧ್ಯವಾಗಿರುತ್ತದೆ. ಸರಕು ಸಾಗಾಣ ಕೆ ವಾಹನದ ಬಾಡಿಗೆಯು ಬೇಡಿಕೆ ಮತ್ತು ಪೂರೈಕೆ ಗೆ ಅನುಗುಣವಾಗಿ ನಿಗಧಿಯಾಗಿರುತ್ತದೆ. ಆದರೆ ಸರಕು ವಾಹನಗಳ ಪೂರೈಕೆಯು ಬೇಡಿಕೆಗಿಂತ ಹೆಚ್ಚಾಗಿರುವುದರಿಂದ, ನಿರ್ವಹಣಾ ವೆಚ್ಚ ಆಧಾರಿತವಾಗಿ ವಾಹನ ಬಾಡಿಗೆ ಪಡೆಯಲು ಸಾಧ್ಯವಾಗದೆ. ಸರಕು ಸಾಗಾಣ ಕೆ ವಾಹನದ ಮಾಲೀಕ ನಷ್ಟವನ್ನು ಅನುಭವಿಸುತ್ತಾ ಜೀವನ ನಿರ್ವಹಣೆ ಮಾಡಲಾರದೆ, ವಾಹನ ಕೊಳ್ಳಲು ಪಡೆದ ಸಾಲದ ಕಂತುಗಳನ್ನು ಮರುಪಾವತಿ ಮಾಡಲಾರದೆ ತೊಂದರೆಗೆ ಒಳಗಾಗಿದ್ದಾರೆ ಎಂದರು.

ಆದ ಕಾರಣ ರಾಜ್ಯ ಹಾಗು ಕೇಂದ್ರ ಸರಕಾರಗಳೂ ಡೀಸೆಲ್ ಮೇಲೆ ವಿಧಿಸುತ್ತಿರುವ ತೆರಿಗೆಗಳನ್ನು ಕೂಡಲೆ ಇಳಿಸಬೇಕೆಂದು ರಸ್ತೆ ಟೋಲ್ ಶುಲ್ಕದಿಂದ ಸರಕು ವಾಹನಗಳಿಗೆ ವಿನಾಯಿತಿ ನೀಡಬೇಕೆಂದು ಸರಕಾರವನ್ನು ಜಿಲ್ಲಾಧಿಕಾರಿಗಳ ಮುಖಾಂತರ ಒತ್ತಾಯಿಸುವುದಾಗಿ ತಿಳಿಸಿದರು.

ಚಾಮರಾಜನಗರ ಲಾರಿ ಓನರ್ಸ್ ಅಸೋಸಿಯೇಷನ್ ಉಪಾಧ್ಯಕ್ಷ ಮುಕ್ತಾರ್ ಪಾಷಾ, ಇರ್ಷಾದ್ ಪಾಷಾ, ಖಜಾಂಚಿ ಸುರೇಶ, ಮುಸಾಕ್ ಅಹಮದ್, ಪದಾಧಿಕಾರಿಗಳು ಹಾಜರಿದ್ದರು.

## ಶಾಲಾ ಪ್ರಾರಂಭೋತ್ಸವ: ಸಂಭ್ರಮ ಸಡಗರಿಂದ ವಿದ್ಯಾರ್ಥಿಗಳನ್ನು ಬರಮಾಡಿಕೊಂಡು ಶಿಕ್ಷಕರು



**ಚಾಮರಾಜನಗರ:** ತಾಲೂಕಿನ ಅಂಕನಶೆಟ್ಟಿಪುರ ಪ್ರೇರಣಾ ವಿದ್ಯಾ ಸಂಸ್ಥೆ ಆಡಳಿತ ಮಂಡಲಿ ಹಾಗೂ ಶಿಕ್ಷಕ ವೃಂದವರು ಶಾಲಾ ಆರಂಭದ ದಿನವಾದ ಇಂದು ವಿಶೇಷವಾಗಿ ವಿದ್ಯಾರ್ಥಿಗಳನ್ನು ಶಾಲೆಗೆ ಸ್ವಾಗತಿಸಿ, ಹಬ್ಬದ ಮಾದರಿಯಲ್ಲಿ ಮಕ್ಕಳನ್ನು ಸಂಭ್ರಮದಿಂದ ಬರಮಾಡಿಕೊಂಡರು.

ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಪ್ರೇರಣಾ ವಿದ್ಯಾ ಸಂಸ್ಥೆಯ ಕಟ್ಟಡಕ್ಕೆ ಶಾಲಾ ಪ್ರಾರಂಭೋತ್ಸವ ಅಂಗವಾಗಿ ಮೂರು ದಿನಗಳ ಮುಂಚಿತವಾಗಿ ಸಂಪೂರ್ಣ ಕಟ್ಟಡಕ್ಕೆ ವಿದ್ಯುತ್ ದೀಪಾಂಲಕಾರಗೊಳಿಸಿ, ಶಾಲೆಯ ಎಲ್ಲಾ ಕೊಠಡಿಗಳನ್ನು ಸ್ವಚ್ಚಗೊಳಿಸಿ, ಸುಣ್ಣ ಬಣ್ಣಗಳ ಹಾಗೂ ಬಗೆಬಗೆಯ ಚಿತ್ತಾರಗಳನ್ನು ಬಿಡಿಸಿ ಸಿದ್ದತೆ ಮಾಡಿಕೊಳ್ಳಲಾಗಿತ್ತು. ಅಲ್ಲದೇ ಪ್ರತಿ ಶಾಲೆಯ ಮಕ್ಕಳ ಕೊಠಡಿಗಳಲ್ಲಿ ಸೆಲ್ಪಿ ಪಾಯಿಂಟ್ ರಚನೆ ಮಾಡಿ, ಬಣ್ಣ ಬಣ್ಣಗಳಿಂದ ಕಂಗೊಳಿಸಿತ್ತು.

**ವಿದ್ಯಾರ್ಥಿಗಳಿಗೆ ಗುಲಾಬಿ, ಸಿಹಿ ನೀಡಿ ಸ್ವಾಗತಿಸಿದ ಶಿಕ್ಷಕರು:** ಶೈಕ್ಷಣ ಕ ವರ್ಷದ ಆರಂಭದ ಮೊದಲ ದಿನ ಶಾಲೆಗೆ ಆಗಮಿಸಿ ವಿದ್ಯಾರ್ಥಿಗಳಿಗೆ ಶಾಲೆಯ ಮುಖ್ಯ ಶಿಕ್ಷಕ ಮಹೇಕುಮಾರ್ ಹಾಗೂ ಸಹ ಶಿಕ್ಷಕ ವೃಂದವರು ಮುಖ್ಯ ದ್ವಾರದಲ್ಲಿ ನಿಂತು ಮಕ್ಕಳಿಗೆ ಸ್ವಾಗತ ಕೋರಿ ಗುಲಾಬಿ ಹಾಗೂ ಸಿಹಿ ತಿಂಡಿಯನ್ನು ನೀಡಿ ಸ್ವಾಗತ ಕೋರಿ ಬರಮಾಡಿಕೊಂಡರು. ವಿದ್ಯಾರ್ಥಿಗಳು ಹಾಗೂ ಪೋಷಕರು ಸಹ ಉತ್ಸಾಹದಿಂದ ಮೊದಲ ದಿನವೇ ಮಕ್ಕಳೊಂದಿಗೆ ಆಗಮಿಸಿ, ಸಂಭ್ರಮಿಸಿದರು.

ಸಂಸ್ಥೆಯ ಕಾರ್ಯದರ್ಶಿ ವಕೀಲ ಶಿವಸ್ವಾಮಿ ವಡ್ಡಗಪುರ ಮಾತನಾಡಿ, ಶಿಕ್ಷಣ ಸಂಸ್ಥೆಯನ್ನು ಮುನ್ನಡೆಸುವುದು ಪುಣ್ಯದ ಕೆಲಸವಾಗಿದೆ. ಮಕ್ಕಳಿಗೆ ಶಿಕ್ಷಣ ನೀಡಿ, ಅವರನ್ನು ಪ್ರಬುದ್ಧ ಭಾರತದ ಪ್ರಜೆಯನ್ನಾಗಿಸುವ ಜೊತೆಗೆ ಉತ್ತಮ ಎಂದರು.

ಟ್ರನ ನಟರಾಜನ್, ಮುಖ್ಯ ಶಿಕ್ಷಕ ಮಹೇಕುಮಾರ್, ಸಹ ಶಿಕ್ಷಕ ವೃಂದವರು, ವಿದ್ಯಾರ್ಥಿಗಳು ಮತ್ತು ಪೋಷಕರು ಹಾಜರಿದ್ದರು.

# ಡಿಕೆಶಿ: ಕರ್ನಾಟಕದ ಹೊಸ ನಾಯಕತ್ವದ ಅಧ್ಯಾಯ

## ಡಿ.ಕೆ.ಶಿವಕುಮಾರ್ ಸಿಎಂ, ಜಿಲ್ಲೆಯ ಜನರಲ್ಲಿ ಹೆಚ್ಚಿದ ಅಭಿವೃದ್ಧಿಯ ನಿರೀಕ್ಷೆ

## ಪಕ್ಷದ ಟ್ರಬಲ್ ಶೂಟರ್ ರಾಜ್ಯ, ಜಿಲ್ಲೆಯ ಅಭಿವೃದ್ಧಿಯ ಸವಾಲುಗಳನ್ನು ನಿಭಾಯಿಸಲಿ ಎಂಬ ಹಾರೈಕೆ

▸▸ ಬಿ.ವಿ.ಸೂರ್ಯ ಪ್ರಕಾಶ್

ರಾಮನಗರ: ಕರ್ನಾಟಕ ರಾಜಕೀಯದಲ್ಲಿ ಹೊಸ ಅಧ್ಯಾಯ ಆರಂಭವಾಗುತ್ತಿದೆ. ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ ಡಿ.ಕೆ. ಶಿವಕುಮಾರ್ ಅವರು ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಲು ಸಜ್ಜಾಗಿರುವುದು ರಾಜ್ಯದ ರಾಜಕೀಯ ಇತಿಹಾಸದಲ್ಲಿ ಮಹತ್ವದ ಬೆಳವಣಿಗೆಯಾಗಿದೆ.

ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲೆಯ ಕನಕಪುರ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುವ ಡಿ.ಕೆ. ಶಿವಕುಮಾರ್ ಅವರು ಹಲವು ದಶಕಗಳಿಂದ ಕಾಂಗ್ರೆಸ್ ಪಕ್ಷದ ಸಂಘಟನೆ ಬಲಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಪಕ್ಷದ ಸಂಕಷ್ಟದ ಸಮಯಗಳಲ್ಲಿ ನಾಯಕತ್ವ ವಹಿಸಿ, ಕಾರ್ಯಕರ್ತರನ್ನು ಒಗ್ಗೂಡಿಸುವ ಮೂಲಕ ಅವರು ತಮ್ಮದೇ ಆದ ರಾಜಕೀಯ ಗುರುತನ್ನು ನಿರ್ಮಿಸಿಕೊಂಡಿದ್ದಾರೆ.

ರಾಜ್ಯದ ಉಪಮುಖ್ಯಮಂತ್ರಿಯಾಗಿ ಹಾಗೂ ಕೆಪಿಸಿಸಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಅವಧಿಯಲ್ಲಿ ಅವರು ಆಡಳಿತ ಮತ್ತು ಸಂಘಟನೆ ಎರಡರಲ್ಲೂ ಅನುಭವ ಗಳಿಸಿದ್ದಾರೆ. 2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಗೆಲುವಿನ ಹಿಂದೆ ಅವರ ಸಂಘಟನಾ ಸಾಮರ್ಥ್ಯ ಪ್ರಮುಖ ಕಾರಣಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ.



### ಜಿಲ್ಲೆಯ ಅಭಿವೃದ್ಧಿಯ ವೇಗದ ನಿರೀಕ್ಷೆ

ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸುವ ಹೊತ್ತಿನಲ್ಲಿ ಡಿ.ಕೆ.ಶಿವಕುಮಾರ್ ಅವರ ಮುಂದೆ ಹಲವು ಸವಾಲುಗಳಿವೆ. ರಾಜ್ಯದ ಆರ್ಥಿಕ ಅಭಿವೃದ್ಧಿ, ಉದ್ಯೋಗ ಸೃಷ್ಟಿ, ಕೃಷಿ ಕ್ಷೇತ್ರದ ಬಲವರ್ಧನೆ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಸಾಮಾಜಿಕ ನ್ಯಾಯದಂತಹ ವಿಷಯಗಳಿಗೆ ಅವರು ಆದ್ಯತೆ ನೀಡಬೇಕಾಗಿದೆ.

ಜನರು ಹೊಸ ಸರ್ಕಾರದಿಂದ ಅಭಿವೃದ್ಧಿಮುಖಿ ಆಡಳಿತವನ್ನು ನಿರೀಕ್ಷಿಸುತ್ತಿದ್ದಾರೆ. ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವೆ ಸಮತೋಲನ ಸಾಧಿಸುವುದು, ಹೂಡಿಕೆಗಳನ್ನು ಆಕರ್ಷಿಸುವುದು ಹಾಗೂ ಯುವಕರಿಗೆ ಅವಕಾಶಗಳನ್ನು ಹೆಚ್ಚಿಸುವುದು ಕೂಡ ಪ್ರಮುಖ ಕಾರ್ಯಗಳಾಗಿವೆ. ರಾಜ್ಯದ ಜನರ ನಿರೀಕ್ಷೆ ಇದಾದರೆ, ಡಿಕೆಶಿ ಅವರ ಸ್ವಂತ ಜಿಲ್ಲೆ ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲೆಯ ಜನರ ನಿರೀಕ್ಷೆ ಮುಗಿಲೆತ್ತರಕ್ಕಿದೆ. ಜಿಲ್ಲೆಯಿಂದ ಆಯ್ಕೆಯಾದ ಮುಖ್ಯಮಂತ್ರಿಗಳು ತಮ್ಮ ಶಕ್ತ್ಯಾನುಸಾರ ಜಿಲ್ಲೆಯ ಅಭಿವೃದ್ಧಿಗೆ ಕೊಡುಗೆ ನೀಡಿದ್ದಾರೆ. ಡಿ.ಕೆ.ಶಿವಕುಮಾರ್ ಅವರು ಇದೇ ಜಿಲ್ಲೆಯ ಪುತ್ರ. ಹೀಗಾಗಿ ಇವರ ಆಡಳಿತಾವಧಿಯಲ್ಲಿ ಜಿಲ್ಲೆಯ ಜನರ ನಿರೀಕ್ಷೆ ಸಹಜವಾಗಿಯೇ ಹೆಚ್ಚಾಗಿದೆ.

### ಕನಕಪುರದ ಬಂಡೆ ಈಗ ಸಿಎಂ!

ಡಿ.ಕೆ.ಶಿವಕುಮಾರ್ ಅವರು ರಾಜ್ಯ ರಾಜಕಾರಣದಲ್ಲಿ ತಮ್ಮದೇ ಆದ ಪ್ರಭಾವಲಯವನ್ನು ಕಟ್ಟಿಕೊಂಡಿದ್ದಾರೆ. ಇವರಿಗೆ ಬೆನ್ನೆಲುಭಾಗಿರುವವರು ಇವರ ಸಹೋದರ ಡಿ.ಕೆ. ಸುರೇಶ್. ರಾಜ್ಯ ಹಾಗೂ ದೇಶದಲ್ಲಿ ಕನಕಪುರದ ಬಂಡೆ ಎಂದೇ ಗುರುತಿಸಿಕೊಂಡಿದ್ದಾರೆ. ಇವರು ರಾಜಕೀಯದಲ್ಲಿ ಬೆಳೆದು ಬಂದ ಕಥೆಯೇ ರೋಚಕವಾದದ್ದು. ಸಿಎಂ ಹುದ್ದೆಯನ್ನು ಅಲಂಕರಿಸುತ್ತಿರುವ ಡಿ.ಕೆ.ಶಿವಕುಮಾರ್ ಅವರು ಬೆಂಗಳೂರು ದಕ್ಷಿಣ ಜಿಲ್ಲೆಯ ಕನಕಪುರ ತಾಲೂಕಿನ ದೊಡ್ಡಾಲಹಳ್ಳಿಯ ಕೆಂಪೇಗೌಡ ಹಾಗೂ ಗೌರಮ್ಮ ದಂಪತಿಯ ಪುತ್ರನಾಗಿ 1961 ಮೇ 15 ರಂದು ಜನಿಸಿದರು.



### ವೈಯಕ್ತಿಕ ಜೀವನ

ಡಿ.ಕೆ.ಶಿವಕುಮಾರ್ 1993 ರಲ್ಲಿ ಉಷಾ ಅವರನ್ನು ವಿವಾಹವಾದರು. ಇವರಿಗೆ ಐಶ್ವರ್ಯ ಮತ್ತು ಆಭರಣ ಎಂಬ ಇಬ್ಬರು ಹೆಣ್ಣುಮಕ್ಕಳು ಮತ್ತು ಆಕಾಶ್ ಎಂಬ ಒಬ್ಬ ಮಗ. ಅವರ ಹಿರಿಯ ಮಗಳು ಕೆಫೆ ಕಾಫಿ ಡೇ ಸಂಸ್ಥಾಪಕ ವಿಜಿ ಸಿದ್ಧಾರ್ಥ್ ಅವರ ಮಗ ಅಮರ್ತ್ಯ ಅವರನ್ನು ವಿವಾಹವಾಗಿದ್ದಾರೆ. ತಮ್ಮ ಪ್ರಾಥಮಿಕ ಹಾಗೈ ಹೈಸ್ಕೂಲು ಶಿಕ್ಷಣವನ್ನು ಕನಕಪುರದಲ್ಲಿ ಪೂರೈಸಿದರು. ನಂತರ ಬೆಂಗಳೂರಿನ ಸರ್ಕಾರಿ ಕಲಾ ಕಾಲೇಜಿನಲ್ಲಿ ಬಿ.ಎ ಪದವಿಯನ್ನು ಮುಗಿಸಿದರು. ಮುಕ್ತ ವಿಶ್ವವಿದ್ಯಾಲಯದಲ್ಲಿ ರಾಜ್ಯಶಾಸ್ತ್ರದಲ್ಲಿ ಎಂ.ಎ ಪದವಿಯನ್ನು ಪಡೆದಿದ್ದಾರೆ.

ಶಿವಕುಮಾರ್ ಅವರು 1980ರ ದಶಕದ ಆರಂಭದಲ್ಲಿ ವಿದ್ಯಾರ್ಥಿ ನಾಯಕರಾಗಿ ತಮ್ಮ ರಾಜಕೀಯ ಜೀವನವನ್ನು ಪ್ರಾರಂಭಿಸಿದರು. ವಿದ್ಯಾರ್ಥಿಗಳ ಮುಂಚೂಣಿಗೆ ಹಲವು ಹೋರಾಟಗಳಲ್ಲಿ ಭಾಗವಹಿಸಿದ್ದರು, ಇದಾದ ನಂತರ ಯುವ ಕಾಂಗ್ರೆಸ್ ನಾಯಕರಾಗಿ ರಾಜ್ಯದಲ್ಲಿ ಪಕ್ಷ ಕಟ್ಟುವಲ್ಲಿ ಸಾಕಷ್ಟು ಶ್ರಮಿಸಿದ್ದಾರೆ. ಇದಾದ ನಂತರ ಕ್ರಮೇಣವಾಗಿ ಕಾಂಗ್ರೆಸ್ ನಲ್ಲಿ ಶ್ರೇಣಿಯ ಮೂಲಕ ಹಂತ ಹಂತವಾಗಿ ವಿವಿಧ ಹುದ್ದೆಗಳನ್ನು ಅಲಂಕರಿಸಿದರು. 1989 ಸಾತನೂರು ಕ್ಷೇತ್ರದಿಂದ ಕರ್ನಾಟಕ ವಿಧಾನಸಭೆಗೆ ಆಯ್ಕೆಯಾದಾಗ ಅವರು ತಮ್ಮ ಮೊದಲ ಚುನಾವಣೆಯಲ್ಲಿ ಗೆದ್ದರು. ಆಗ ಅವರಿಗೆ ಕೇವಲ 27 ವರ್ಷ ವಯಸ್ಸಾಗಿತ್ತು.



ಇದಾದ ಬಳಿಕ ಶಿವಕುಮಾರ್ ನಂತರ 1994, 1999 ಮತ್ತು 2004ರ ವಿಧಾನಸಭಾ ಚುನಾವಣೆಗಳಲ್ಲಿ ಅದೇ ಕ್ಷೇತ್ರದಿಂದ ಮರುಚುನಾಯಿತರಾದರು. ಅವರು 2008, 2013, 2018 ಮತ್ತು 2023 ರಲ್ಲಿ ಕನಕಪುರ ಕ್ಷೇತ್ರದಲ್ಲಿ ಗೆಲುವು ಸಾಧಿಸಿಕೊಂಡು ಬರುತ್ತಿದ್ದಾರೆ.

### ರಾಜ್ಯ ನಿವಾಸಿಗಳ ಆಶಯ

ರಾಜಕೀಯ ಹೋರಾಟ, ಸಂಘಟನಾ ಸಾಮರ್ಥ್ಯ ಮತ್ತು ಆಡಳಿತಾತ್ಮಕ ಅನುಭವದ ಮೂಲಕ ರಾಜ್ಯದ ಉನ್ನತ ಹುದ್ದೆಗೆ ಏರಿರುವ ಡಿ.ಕೆ. ಶಿವಕುಮಾರ್ ಅವರ ನಾಯಕತ್ವ ಕರ್ನಾಟಕದ ಭವಿಷ್ಯವನ್ನು ಯಾವ ರೀತಿಯಲ್ಲಿ ರೂಪಿಸುತ್ತದೆ ಎಂಬುದನ್ನು ರಾಜ್ಯದ ಜನತೆ ಕುತೂಹಲದಿಂದ ಗಮನಿಸುತ್ತಿದ್ದಾರೆ. ಹೊಸ ನಾಯಕತ್ವದೊಂದಿಗೆ ಕರ್ನಾಟಕ ಅಭಿವೃದ್ಧಿಯ ಹೊಸ ದಿಕ್ಕಿನತ್ತ ಸಾಗಲಿ ಎಂಬುದು ರಾಜ್ಯದ ಜನರ ಆಶಯವಾಗಿದೆ.

**ಡಿಕೆಶಿ ಅವರು ನಿರ್ವಹಿಸಿದ ಹುದ್ದೆಗಳು**

| | |
|---|---|
| 1989–1994 | ಕಾರಾಗೃಹಗಳು ಮತ್ತು ಗೃಹರಕ್ಷಕರ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ. |
| 1999–2004 | ನಗರಾಭಿವೃದ್ಧಿ ಸಚಿವ |
| 2004–2008 | ಶಾಸಕರು |
| 2008–2013 | ಶಾಸಕರು |
| 2008–2010 | ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿ ಸೇವೆ |
| 2013–2018 | ಇಂಧನ ಸಚಿವರಾಗಿ ಕರ್ತವ್ಯ |
| 2018–2023 | ನೀರಾವರಿಮತ್ತು ವೈದ್ಯಕೀಯ ಶಿಕ್ಷಣ ಸಚಿವ |
| 2020 ರಿಂದ ಇಲ್ಲಿಯವರೆಗೆ | ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು |
| 2023 ರಿಂದ 2026 | ಕರ್ನಾಟಕದ ಉಪಮುಖ್ಯಮಂತ್ರಿ |
| 2026ರ ಜೂನ್ 3ರಿಂದ ಕರ್ನಾಟಕದ ಮುಖ್ಯಮಂತ್ರಿ | |


**ನಗರಸಭಾ ಕಾರ್ಯಾಲಯ ಕೊಳ್ಳೇಗಾಲ**
**ಚಾಮರಾಜನಗರ ಜಿಲ್ಲೆ**
Phone No: 08224-252016
Website :www.kollegalacity.mrc.gov.in
E-mail:itstaff_ulb_kollegal@yahoo.co.in
ಸಂಖ್ಯೆ:ನಸಕೊ/ಆ.ಶಾ./ನಮ್ಮ ಕ್ಲಿನಿಕ್/ಪಿಆರ್/7/2026–27
ದಿನಾಂಕ : 01.06.2026

**ಟೆಂಡರ್ ಪ್ರಕಟಣೆ**

2022–23ನೇ ಸಾಲಿನ 15ನೇ ಹಣಕಾಸುಯೋಜನೆಯ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ನಗರ ಆರೋಗ್ಯ ಕ್ಷೇಮ ಕೇಂದ್ರಗಳಿಗೆ ಅವಶ್ಯವಿರುವ **1.Operational cost for UPHC, 2.Teli-consultation equipment for UPHC, 3.UV water purifier, 4.Cusco Speculum Equipment, 5.Railing Screen Seperator, 6.waste water management, 7.Oral health care Equipment, 8.Pallative and Geatric care 9.Basic Equipment 1 first Aid Box, 10.Basic Equipment 2 steel Racks, 11.Basic Equipment 1 wheel chair** ಉಪಕರಣಗಳಿಗೆ ದರ ಒಂದಕ್ಕೆ ಕೆ.ಜಿ.–1 ದಸ್ತಾವೇಜಿನ ರೀತ್ಯಾ ತಯಾರಕರುಗಳಿಂದ /ಸರಬರಾಜುದಾರರಿಂದ ಟೆಂಡರ್‌ನ್ನು ಆಹ್ವಾನಿಸಿದ್ದು, ಭಾಗವಹಿಸಲು ಇಚ್ಛಿಸುವವರು ದಸ್ತಾವೇಜು ಪಡೆಯಬಹುದಾಗಿದೆ. ಅಂದಾಜು ಮೊತ್ತ **ರೂ.3.11ಲಕ್ಷ,** ಇಎಂಡಿ ಮೊತ್ತ **ರೂ.7780/–ಗಳಾಗಿದ್ದು,** ಟೆಂಡರ್ ದಸ್ತಾವೇಜು ಪಡೆಯಲು & ಟೆಂಡರ್‌ನ್ನು ಹಾಕಲು ಕೊನೆಯ **ದಿ:15.06.2026,** ಮತ್ತು ಸಮಯ ಸಾಯಂಕಾಲ 4.00ಗಂಟೆಗೆ ಟೆಂಡರ್ ತೆರೆಯುವ **ದಿನಾಂಕ: 16.06.2026 ರ ಸಾಯಂಕಾಲ 5.00 ಗಂಟೆಗೆ**

**ವಿಶೇಷ ಸೂಚನೆ:**–ತಾಂತ್ರಿಕ ನಿರ್ದಿಷ್ಟತೆ ಮತ್ತು ಹೆಚ್ಚಿನ ಮಾಹಿತಿ ಹಾಗೂ ಷರತ್ತು & ನಿಬಂಧನೆಗಳನ್ನು ಕಛೇರಿಯ ವೇಳೆ ಆರೋಗ್ಯ ಶಾಖೆಯಲ್ಲಿ ಪಡೆಯಬಹುದು

ಸಹಿ/–ಪೌರಾಯುಕ್ತರು
ನಗರಸಭೆ, ಕೊಳ್ಳೇಗಾಲ
ಸಂಖ್ಯೆ:ವಾಸಾಸಂಇ:ಚಾನಗರ:142:2026–27


# 189.49 ಕೋಟಿ ರೂ. ಸೈಬರ್ ವಂಚನೆ: ಮಹಾರಾಷ್ಟ್ರದ ಇಬ್ಬರ ಬಂಧನ

ಮೈಸೂರು: ದೇಶದ ವಿವಿಧೆಡೆ ಸುಮಾರು 189.49 ಕೋಟಿ ರೂ. ಮೊತ್ತದ ಸೈಬರ್ ವಂಚನೆ ಮಾಡಿದ್ದ ಮಹಾರಾಷ್ಟ್ರದ ಇಬ್ಬರು ಆರೋಪಿಗಳನ್ನು ಜಿಲ್ಲೆಯ ಪೊಲೀಸರು ಬಂಧಿಸಿದ್ದು, ಮತ್ತೊಬ್ಬ ತಲೆಮರೆಸಿಕೊಂಡಿದ್ದಾನೆ.

ಮಹಾರಾಷ್ಟ್ರದ ಯತೀನ್ ರಮೇಶ್ ಜೈನ್ ಹಾಗೂ ಮೊಹಮ್ಮದ್ ಶಾದಬ್ ಅಂಜುಮ್ ಬಂಧಿತರು. ಪ್ರಕರಣದ ಪ್ರಮುಖ ಆರೋಪಿ ಪಂಜಾಬ್‌ನ ಅಮಿತ್ ಸಿಂಗ್ ತಲೆಮರೆಸಿಕೊಂಡಿದ್ದಾನೆ. ಕೆ.ಆರ್. ನಗರದ ಚಿನ್ನದ ವ್ಯಾಪಾರಿ ಜಿತೇಂದ್ರಕುಮಾರ್ ಖಂಡೆಲ ವಾಲ್ ಎಂಬುವರನ್ನು ಆರೋಪಿಗಳು ವಾಟ್ಸ್‌ಆಪ್ ಮೂಲಕ ಜ.27ರಂದು ಸಂಪರ್ಕಿಸಿ, ಪ್ರತಿ ಗ್ರಾಂ ಚಿನ್ನಕ್ಕೆ ಇಂದಿನ ಮಾರುಕಟ್ಟೆ ದರಕ್ಕಿಂತ 600 ರೂ. ಕಡಿಮೆ ನೀಡುವುದಾಗಿ ನಂಬಿಸಿದ್ದರು. ಬಳಿಕ 100 ಗ್ರಾಂ ಚಿನ್ನಕ್ಕೆ 13, 69,000 ರೂ.ಗಳನ್ನು ಬ್ಯಾಂಕ್ ಖಾತೆಗೆ ಜಮೆ ಮಾಡಿಸಿಕೊಂಡಿದ್ದರು.

ಈ ಕುರಿತು ಪೊಲೀಸ್ ಇನ್‌ಸ್ಪೆಕ್ಟರ್ ಎಸ್.ಪಿ. ಸುನೀಲ್ ನೇತೃತ್ವದ ತಂಡ ತನಿಖೆ ಕೈಗೆತ್ತಿಕೊಂಡು ಮಹಾರಾಷ್ಟ್ರದಲ್ಲಿ ಇಬ್ಬರು ಆರೋಪಿಗಳನ್ನು ಬಂಧಿಸಿದೆ. ಆರೋಪಿಗಳು ಸಾರ್ವಜನಿಕರ ದಾಖಲಾತಿ ಪಡೆದು ತೆರೆದಿರುವ 56 ಬ್ಯಾಂಕ್ ಖಾತೆಗಳ ಮೇಲೆ ದೇಶದ ವಿವಿಧೆಡೆ 196 ಸೈಬರ್ ದೂರುಗಳು ದಾಖಲಾಗಿದ್ದು, ಒಟ್ಟು 189.49 ಕೋಟಿ ರೂ.ವಂಚನೆ ನಡೆದಿದೆ ಎನ್ನಲಾಗಿದೆ.

### 173 ಮೊಬೈಲ್‌ಗಳು ಪತ್ತೆ

ಜಿಲ್ಲೆಯಲ್ಲಿ ಮೇ ತಿಂಗಳಿನಲ್ಲಿ ಒಟ್ಟು 263 ಜನರು ಮೊಬೈಲ್ ಕಳೆದುಕೊಂಡಿದ್ದರು. ಈ ಕುರಿತು ತನಿಖೆ ನಡೆಸಿದ ಪೊಲೀಸರು 35 ಲಕ್ಷ ರೂ. ಮೌಲ್ಯದ 173 ಮೊಬೈಲ್‌ಗಳನ್ನು ಪತ್ತೆ ಮಾಡಿದ್ದಾರೆ.




ಜಿಲ್ಲೆಯಲ್ಲಿ 2024ರಲ್ಲಿ 2,475 ಮೊಬೈಲ್‌ಗಳು ಕಳ್ಳತನವಾಗಿದ್ದು, 300 ಮೊಬೈಲ್‌ಗಳು ಪತ್ತೆಯಾಗಿವೆ. 2025ರಲ್ಲಿ 2530 ಮೊಬೈಲ್‌ಗಳು ಕಳ್ಳತನವಾಗಿದ್ದು, 372 ಪತ್ತೆ ಹಚ್ಚಲಾಗಿದೆ. 2026ರಲ್ಲಿ ಇದುವರೆಗೂ 1075 ಮೊಬೈಲ್‌ಗಳು ಕಳವಾಗಿದ್ದು, ಈ ಪೈಕಿ 445 ಮೊಬೈಲ್‌ಗಳನ್ನು ಬೇರೆಯವರು ಬಳಸುತ್ತಿರುವ ಸಂಗತಿ ಪತ್ತೆ ಹಚ್ಚಿ, 283 ಮೊಬೈಲ್‌ಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಮಾಹಿತಿ ನೀಡಿದರು.

ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಸಿ.ಮಲ್ಲಿಕ್, ಎಲ್.ನಾಗೇಶ್ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಸೈಬರ್ ಕ್ರೈಂ ಡಿವೈಎಸ್ಪಿ ಆರ್.ಶ್ರೀಕಾಂತ್, ಇನ್‌ಸ್ಪೆಕ್ಟರ್ ಎಸ್.ಪಿ. ಸುನಿಲ್, ಸಬ್ ಇನ್‌ಸ್ಪೆಕ್ಟರ್ ಲಕ್ಷ್ಮೀ, ಸಿಬ್ಬಂದಿ ಎಸ್.ಮಂಜುನಾಥ, ಎಚ್.ವಿ.ರಂಗಸ್ವಾಮಿ, ಜಿ.ಎಸ್.ಅಭಿಷೇಕ್, ಸಿ.ಎನ್.ಮಹೇಶ ಪಾಲ್ಗೊಂಡಿದ್ದರು.

### ಹುಣಸೂರು ದರೋಡೆಕೋರರೂ ನೇಪಾಳದಲ್ಲಿ ಕಣ್ಮರೆ

ಮೈಸೂರು: ಹುಣಸೂರಿನ ಚಿನ್ನದಂಗಡಿಯಲ್ಲಿ ನಡೆದಿದ್ದ ಚಿನ್ನ ದರೋಡೆ ಪ್ರಕರಣ ಸಂಬಂಧ ಈಗಾಗಲೇ ಹಲವು ಆರೋಪಿಗಳನ್ನು ಬಂಧಿಸಲಾಗಿದೆ. ಆದರೆ, ಪ್ರಮುಖ ಆರೋಪಿ ಪಾಲುಸಿಂಗ್ ಪತ್ತೆಯಾಗಿಲ್ಲ. ಈತ ನೇಪಾಳದಲ್ಲಿ ತಲೆಮರೆಸಿಕೊಂಡಿರುವ ಸಾಧ್ಯತೆ ಇದೆ. ಪ್ರಮುಖ ಆರೋಪಿ ಸಿಗದ ಕಾರಣ ದರೋಡೆಯಾಗಿರುವ ಚಿನ್ನ ಏನಾಗಿದೆ ಎಂಬುದು ತಿಳಿದಿಲ್ಲ. ಆತನ ಸೆರೆಗೆ ಕಾರ್ಯಾಚರಣೆ ಮುಂದುವರಿದಿದೆ ಎಂದು ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

### ಬಾಂಗ್ಲಾದವರ ಮೇಲೆ ನಿಗಾ

ಜಿಲ್ಲೆಯಲ್ಲಿ ಬಾಂಗ್ಲಾ ನುಸುಳುಕೋರರು ಪ್ರವೇಶಿಸದಂತೆ ನಿಗಾ ವಹಿಸಲಾಗಿದೆ. ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ರಾಜ್ಯಗಳಿಂದ ಬರುತ್ತಿರುವ ವಲಸೆ ಕಾರ್ಮಿಕರ ಮೇಲೆ ನಿಗಾವಹಿಸಿದ್ದು, ನಂಜನಗೂಡು ತಾಲೂಕಿನ ಕೈಗಾರಿಕಾ ಪ್ರದೇಶ ಸೇರಿದಂತೆ ವಿವಿಧ ಕೈಗಾರಿಕಾ ಪ್ರದೇಶಗಳಲ್ಲಿ ಪರಿಶೀಲಿಸಲಾಗಿದೆ. ಇದುವರೆಗೂ ಬಾಂಗ್ಲಾ ನುಸುಳುಕೋರರು ಪತ್ತೆಯಾಗಿಲ್ಲ ಎಂದು ಮಾಹಿತಿ ನೀಡಿದರು.

### ರೌಡಿಶೀಟರ್ ಬಂಧನ

ಬಂಡಿಪಾಳ್ಯ ಎಪಿಎಂಸಿಯಲ್ಲಿ ವ್ಯಾಪಾರಿಗಳನ್ನು ಬೆದರಿಸಿ ಹಣ ವಸೂಲಿ ಮಾಡುತ್ತಿದ್ದ ರೌಡಿಶೀಟರ್, ಕೈಲಾಸಪುರಂ ನಿವಾಸಿ ಗೌತಮ್ ಎಂಬಾತನನ್ನು ಬಂಧಿಸಲಾಗಿದೆ. ಈತ ಎಪಿಎಂಸಿ ವ್ಯಾಪಾರಿಗಳು, ತರಕಾರಿ ಲಾರಿಗಳಿಂದ ಹಣ ವಸೂಲಿ ಮಾಡುತ್ತಿದ್ದ. ಈ ಸಂಬಂಧ ಮೇ ತಿಂಗಳಲ್ಲಿ ಈತನ ವಿರುದ್ಧ ಪ್ರಕರಣ ದಾಖಲಾಗಿತ್ತು. ಈತನ ವಿರುದ್ಧ 1 ಕೊಲೆ, 4 ಕೊಲೆ ಯತ್ನ ಸೇರಿದಂತೆ 7 ಪ್ರಕರಣಗಳು ದಾಖಲಾಗಿವೆ.


ವರ್ತಮಾನ
ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ


# ತನ್ವೀರ್ ಸೇಠ್‌ಗೆ ಡಿಸಿಎಂ ಮಾಡದಿದ್ದರೆ ಹೋರಾಟ

ಮೈಸೂರು: ಜಿಲ್ಲೆಯ ಹಿರಿಯ ಹಾಗೂ ಅನುಭವಿ ರಾಜಕಾರಣಿ ಶಾಸಕ ತನ್ವೀರ್ ಸೇಠ್ ಅವರನ್ನು ಡಿಸಿಎಂ ಮಾಡದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ರೂಪದಲ್ಲಿ ಹೋರಾಟ ಮಾಡಲಾಗುವುದು ಎಂದು ನರಸಿಂಹರಾಜ ಕ್ಷೇತ್ರದ ವಿವಿಧ ಮುಖಂಡರು ಆಗ್ರಹಿಸಿ ಪ್ರತಿಭಟಿಸಿದರು.

ಗಾಂಧಿನಗರದ ಅಂಬೇಡ್ಕರ್ ವೃತ್ತದಲ್ಲಿ ಈ ಸಂಬಂಧ ಪ್ರತಿಭಟಿಸಿದ ಮುಖಂಡರು ತನ್ವೀರ್ ಸೇಠ್ ಅವರನ್ನು ಡಿಸಿಎಂ ಮಾಡಬೇಕೆಂಬ ನಾಮಫಲಕಗಳನ್ನು ಪ್ರದರ್ಶಿಸಿ ಆಗ್ರಹಿಸಿದರು. ಈ ವೇಳೆ ಅಜೀಜ್ ಸೇಠ್ ಬ್ಲಾಕ್ ಅಧ್ಯಕ್ಷ ಸಯ್ಯದ್ ಇಕ್ಬಾಲ್ ಮಾತನಾಡಿ, ಕಾಂಗ್ರೆಸ್‌ನ ಹಿರಿಯ ರಾಜಕಾರಣಿಯಾದ ಶಾಸಕ ತನ್ವೀರ್ ಸೇಠ್ ಆರು ಬಾರಿ ಸತತ ಪಕ್ಷದಿಂದ ಗೆದ್ದಿದ್ದಾರೆ. ಅಲ್ಲದೆ, ಪಕ್ಷ ಅಧಿಕಾರಕ್ಕೆ ಬಂದಾಗಲೇ ಅವರಿಗೆ ಸಚಿವ ಸ್ಥಾನ ಸಿಗಬೇಕಾಗಿತ್ತು. ಆದರೆ, ಈಗ ಎರಡನೇ ಅವಧಿಗಾದರೂ ಅವರ ದುಡಿಮೆಯನ್ನು ಪರಿಗಣಿಸಿ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕು. ಆ ಮೂಲಕ ಕಾಂಗ್ರೆಸ್‌ನ ಮತ ಬ್ಯಾಂಕ್ ಎಂದೇ ಬಿಂಬಿಸಿಕೊಂಡಿರುವ ಮುಸ್ಲಿಂ ಸಮುದಾಯಕ್ಕೆ ನ್ಯಾಯ ದೊರಕಿಸಿಕೊ ಡುವ ಕೆಲಸವನ್ನು ಕಾಂಗ್ರೆಸ್ ಪಕ್ಷದ ಹೈಕಮಾಂಡ್ ಹಾಗೂ ಹಿರಿಯ ನಾಯಕರು ಮಾಡಬೇಕೆಂದು ಆಗ್ರಹಿಸಿದರು.



ಡಿಸಿಸಿ ಮೈಸೂರು ನಗರ ಜಿಲ್ಲಾ ಉಪಾಧ್ಯಕ್ಷ ಮಾದೇಗೌಡ ಮಾತನಾಡಿ, ಶಾಸಕ ತನ್ವೀರ್ ಸೇಠ್ ಅನುಭವಿ ರಾಜಕಾರಣಿಯಾಗಿದ್ದು, ಒಂದು ಸಮುದಾಯಕ್ಕೆ ಸೀಮಿತವಾಗಿಲ್ಲದ ರಾಜಕಾರಣಿಯಾಗಿದ್ದಾರೆ. ಅಲ್ಲದೆ ಮೈಸೂರು ಜಿಲ್ಲೆಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಸ್ಥಾನವನ್ನು ಸಮರ್ಥವಾಗಿ ನಿಭಾಯಿಸುವ ಮೂಲಕ ತಮ್ಮ ದಕ್ಷತೆ ತೋರಿದ್ದಾರೆ. ಜತೆಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಪ್ತರಾಗಿರುವ ತನ್ವೀರ್ ಸೇಠ್ ಅವರಿಗೆ ಸಚಿವ ಸ್ಥಾನವನ್ನು ಕಾಂಗ್ರೆಸ್ ಪಕ್ಷ ಎರಡನೇ ಅವಧಿಗೆ ನೀಡುವ ಮೂಲಕ ಈ ಭಾಗದ ನಾಯಕ ಶ್ರಮಕ್ಕೆ ಫಲ ನೀಡಬೇಕು. ಎಂದರು. ಅಜೀಜ್ ಸೇಠ್ ಬ್ಲಾಕ್ ಉಪಾಧ್ಯಕ್ಷ ಶಹಿಲ್ ಶಾ ಅಹಮ್ಮದ್, ಅಫ್ರೋಜ್ ಖಾನ್, ಮಾದೇಗೌಡ, ಅಕ್ಮಲ್ ಪಾಷ, ಮಹಮ್ಮದ್ ಶಿಫ್ಟನ್, ನಗರಪಾಲಿಕೆ ಮಾಜಿ ಸದಸ್ಯ ಪ್ರದೀಪ ಚಂದ್ರ, ಉದಯಕುಮಾರ್, ಕೆಪಿಸಿಸಿ ಸಂಯೋಜಕ ಶೌಕತ್ ಅಲಿಖಾನ್, ಮಹಮದ್ ರಫಿ, ಇರ್ಫಾನ್, ಇಲಿಯಾಸ್ ಬಾಬು, ಮಹಮದ್ ಸಾಬೀರ್, ರಘುರಾಜೇ ಅರಸ್, ರೆಹನ್ ಬೇಗ್, ಮಾಜಿದ್ ಅಹಮ್ಮದ್, ಅಪುದ, ಟೀಪು, ಅಜ್ಮಲ್ ಪಾಷ, ಶ್ರೀನಿವಾಸ್, ಇದ್ದರು.


**ಪುರಸಭಾ ಕಾರ್ಯಾಲಯ, ಕೃಷ್ಣರಾಜನಗರ, ಮೈಸೂರು ಜಿಲ್ಲೆ**
E-Mail ID: itstaff_ulb_krnagar@yahoo.co.in, Phone(O): 08223-262242,
Fax: 08223-262241
ಸಂ:ಪುಸಕೃ/ಜೆ.ಇ.01/ಟೆ.ಪ್ರ/ಪಿ.ಆರ್–07/2026–27 ದಿನಾಂಕ: 29.05.2026

**ಟೆಂಡರ್ ಪ್ರಕಟಣೆ**

**(ಕೆ.ಪಿ.ಪಿ.ಪಿ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)**

ಕೆ.ಆರ್ ನಗರ ಪುರಸಭೆ ವ್ಯಾಪ್ತಿಯಲ್ಲಿ ಪುರಸಭಾ ನಿಧಿಯಡಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು 1999 ಹಾಗೂ 2000ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಪ್ರತ್ಯೇಕವಾಗಿ ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಕಾಮಗಾರಿಗಳನ್ನು ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನ https://kppp.karnataka.gov.in ನಿಂದ ಟೆಂಡರ್ ಷರತ್ತು ಹಾಗೂ ದಾಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆಂದು ತಿಳಿಸಿದೆ. 1) ಟೆಂಡರ್‌ನ್ನು ಸಲ್ಲಿಸಲು ಕಡೆಯ ದಿ: 12.06.2026 ಸಂಜೆ 5.30 ಗಂಟೆಯವರೆಗೆ **2)** ಟೆಂಡರ್ ತೆರೆಯುವ ದಿ: 15.06.2026ರಂದು ಕಛೇರಿಯ ಅವಧಿಯಲ್ಲಿ ಅಥವಾ ಮುಂದೆ ಸೂಚಿಸುವ/ನಿಗಧಿಪಡಿಸುವ ದಿನಾಂಕದಂದು ತೆರೆಯಲಾಗುವುದು.

| ಕ್ರ. ಸಂ | ವಿವರ | ಯೋಜನೆಯ ವಿವರ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಇ.ಎಂ.ಡಿ ಮೊತ್ತ ರೂಗಳಲ್ಲಿ |
|---|---|---|---|---|
| 1. | DMA/2026-27/RD/WORK_INDENT58122 | ಪುರಸಭಾ ನಿಧಿ | 4.75 | 11,875/– |
| 2. | DMA/2026-27/OW/WORK_INDENT58123 | ಪುರಸಭಾ ನಿಧಿ | 4.99 | 12,488/– |
| 3. | DMA/2025-26/RD/WORK_INDENT 56735/CALL-2 | ಪುರಸಭಾ ನಿಧಿ | 4.00 | 10,000/– |
| 4. | DMA/2025-26/RD/WORK_INDENT56695/ CALL-2 | ಪುರಸಭಾ ನಿಧಿ | 3.98 | 9,950/– |
| 5. | DMA/2025-26/OW/WORK_INDENT54849/ CALL-4 | ಪುರಸಭಾ ನಿಧಿ | 2.97 | 7,425/– |
| 6. | DMA/2025-26/IND6074/CALL-2 | 15ನೇ ಹಣಕಾಸು ಯೋಜನೆಯ Health Grant | 1.36 | 3,500/– |
| 7. | DMA/2026-27/SE7842 | ಪುರಸಭಾ ನಿಧಿ | 5.52 | 13,800/– |
| 8. | DMA/2025-26/SE7182/CALL-4 | ಪುರಸಭಾ ನಿಧಿ | 19.44 | 48,600/– |

**ಮೀಸಲಾತಿಯ ವಿವರ:** ಸಾಮಾನ್ಯ

ಸೂಚನೆ:1. ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳು ಇದ್ದರೆ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಆದರೆ ಕೆ.ಪಿ.ಪಿ.ಪಿ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು https://kppp.karnataka.gov.in ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

**ಸಹಿ/– ಮಾನ್ಯ ಆಡಳಿತಾಧಿಕಾರಿಯವರು, ಪುರಸಭೆ, ಕೆ.ಆರ್.ನಗರ**
**ಸಹಿ/– ಮುಖ್ಯಾಧಿಕಾರಿ, ಪುರಸಭೆ, ಕೆ.ಆರ್.ನಗರ**
DIPR/DDMYS/248/KSMCA/180/2026-27


**ಕಬಿನಿ ಹಿನ್ನೀರಿನ ಕೆಲ ಪ್ರದೇಶವನ್ನು ಒತ್ತುವರಿ ಆರೋಪ**

# ಕಬಿನಿ ಹಿನ್ನೀರಿನ ಪ್ರದೇಶ: ಒತ್ತುವರಿ ಗುರುತಿಸಿದ ಅಧಿಕಾರಿಗಳು

ಎಚ್.ಡಿ.ಕೋಟೆ: ಬೋರೇದೇವರ ಮುಂಟಿ ಗ್ರಾಮದಲ್ಲಿ ಕಬಿನಿ ಹಿನ್ನೀರಿನ ಕೆಲ ಪ್ರದೇಶವನ್ನು ಒತ್ತುವರಿ ಮಾಡಲಾಗಿದೆ ಎಂದು ಆರೋಪಿಸಿ ಗ್ರಾಮಸ್ಥರು ನೀಡಿದ್ದ ದೂರಿನನ್ವಯ ಕಂದಾಯ ಹಾಗೂ ನೀರಾವರಿ ಅಧಿಕಾರಿಗಳು ಮಂಗಳವಾರ ಪರಿಶೀಲನೆ ನಡೆಸಿದರು.

ಅಂತರಸಂತೆ ಹೋಬಳಿಯ ಕನಕನಹಳ್ಳಿ ಗ್ರಾಮದ ಸರ್ವೆ ನಂಬರ್ 1, 3/1, 3/2 ರಲ್ಲಿ ಕಾವೇರಿ ನೀರಾವರಿ ನಿಗಮದ (ಸರ್ಕಾರಿ) ಜಾಗಕ್ಕೆ ತಂತಿ ಬೇಲಿ ನಿರ್ಮಾಣ ಮಾಡಿದ್ದಾರೆ. ಇದರಿಂದ ಜಾನುವಾರುಗಳ ಮೇವಿಗೆ ಮತ್ತು ಕುಡಿಯುವ ನೀರಿಗೆ ತೊಂದರೆಯಾಗುತ್ತಿದೆ. ಕನಕನಹಳ್ಳಿ ಗ್ರಾಮದ ರತ್ನಯ್ಯ ಬಿನ್ ಲೇಟ್ ದೊಡ್ಡೇಗೌಡ ಇವರು ಸರ್ಕಾರಿ ಜಮೀನಿಗೆ ತಂತಿ ಬೇಲಿಯನ್ನು ನಿರ್ಮಿಸಿ ಭೂ ಸ್ವಾಧೀನ ಮಾಡಿ ಕೊಂಡಿರುತ್ತಾರೆ. ಸರ್ಕಾರಿ ಜಾಗವನ್ನು ಅತಿಕ್ರಮಿಸಿರುವವರ ವಿರುದ್ಧ ಕಾನೂನು ಕ್ರಮ ಜರಗಿಸುವಂತೆ ಗ್ರಾಮಸ್ಥರು ಆಗ್ರಹಿಸಿದ್ದರು.

ಅರ್ಜಿ ಪರಿಶೀಲಿಸಿದ ತಹಶೀಲ್ದಾರ್ ಆದೇಶದ ಮೇರೆಗೆ ಗ್ರಾಮ ಆಡಳಿತ ಅಧಿಕಾರಿ, ರಾಜ್ಯಸ್ವ ನಿರೀಕ್ಷಕರು, ಭೂ ಮಾಪಕರು, ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಜಂಟಿ ಸರ್ವೆ ಕೈಗೊಂಡ ವೇಳೆ ರತ್ನಯ್ಯ ಸುಮಾರು 2.0ಕ್ಕಿನ ಹೆಚ್ಚು, ಶ್ರೀಶೈಲ ಅಂದಾಜು 1.0ಎಕರೆ ಆಕ್ರಮಿಸಿಕೊಂಡಿರುವುದು ಬೆಳಕಿಗೆ ಬಂದಿದೆ.




ಪ್ರಸ್ತುತ ಈ ಪ್ರದೇಶಗಳಲ್ಲಿ ಬೆಳೆ ಬೆಳೆದಿದ್ದರಿಂದ ಕೇವಲ ಗಡಿ ಗುರುತು ಮಾಡಿರುವ ಕಂದಾಯ ಅಧಿಕಾರಿಗಳು ಫಸಲು ತೆಗೆದ ನಂತರ, ಸರ್ಕಾರಿ ಜಾಗವನ್ನು ತೆರವುಮಾಡಿ ಇಲ್ಲವೇ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಕಾವೇರಿ ನೀರಾವರಿ ನಿಗಮದ ಅಭಿಯಂತರ ಮಹೇಂದ್ರ, ಸರ್ವೇ ಅಧಿಕಾರಿಗಳಾದ ಪ್ರಕಾಶ್, ಶಂಭುಲಿಂಗ, ರಾಜ–ಸ್ವ–ನಿರೀಕ್ಷಕ ಯೋಗೇಶ್, ಗ್ರಾಮ ಆಡಳಿತಾಧಿಕಾರಿ ಶಂಕರ್, ಗ್ರಾಮದ ಮುಖಂಡರಾದ ರೇವಯ್ಯ, ಜೆಸಿಬಿ ರವಿ, ಸುರೇಶ್, ನಾಗರಾಜು, ಕೃಷ್ಣ, ರವಿ, ಪುಟ್ಟರಾಜು, ಗೋವಿಂದನಾಯಕ, ದೊರೆಸ್ವಾಮಿ, ವೇಣುಗೋಪಾಲ್, ಸಣ್ಣಯ್ಯ, ವಿಜಯ್, ಶಿವನಾಯಕ, ವೆಂಕಟಸ್ವಾಮಿ, ವೀರಭದ್ರ ಸೇರಿದಂತೆ ಗ್ರಾಮಸ್ಥರು ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

# ಮೈಶುಗರ್ ಕಾರ್ಖಾನೆಯಲ್ಲಿ ಅಕ್ರಮ ಆರೋಪ:
# ಶ್ವೇತಪತ್ರ ಬಿಡುಗಡೆಗೆ ಒತ್ತಾಯ

**ಮಂಡ್ಯ:** ಮೈಶುಗರ್ ಕಾರ್ಖಾನೆಯ ಆಡಳಿತ ಮಂಡಳಿಯಲ್ಲಿನ ಅಕ್ರಮಗಳನ್ನು ಜಿಲ್ಲೆಯ ರೈತ ಮುಂದಿಡಲು, ವಾಸ್ತವತೆ ಬಿಚ್ಚಿಡಲು ಆಡಳಿತ ಸಂಬಂಧ ಶ್ವೇತಪತ್ರ ಹೊರಡಿಸುವಂತೆ ಮೈಶುಗರ್ ಉಳಿಸಿ ಹೋರಾಟ ಸಮಿತಿ ಹಾಗೂ ಕರುನಾಡ ಸೇವಕರು ಸಂಘಟನೆಯ ರಾಜ್ಯ ವಕ್ತಾರ ಎಂ.ಬಿ.ನಾಗಣ್ಣಗೌಡ ಆಗ್ರಹಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾರ್ವಜನಿಕರ ಹಣ ಲೂಟಿ ಹೊಡೆಯುತ್ತಿರುವ ಕಾರ್ಖಾನೆಯ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕರು ಕಳೆದ ಎರಡು ವರ್ಷಗಳಿಂದ ಮೈಶುಗರ್ ಕಾರ್ಖಾನೆಯನ್ನು ನಷ್ಟದ ಪ್ರಪಾತಕ್ಕೆ ತಳ್ಳಿದ್ದಾರೆ. ಇದನ್ನು ಪ್ರಶ್ನೆ ಮಾಡುವ ರೈತರ ವಿರುದ್ಧ ಕಿಡಿಗೇಡಿಗಳು ಎಂದು ಬೇಜವಾಬ್ದಾರಿ ಹೇಳಿಕೆ ನೀಡುವುದನ್ನು ಖಂಡಿಸಿದರು. ಕಾರ್ಖಾನೆಯ ಅನುಪಯುಕ್ತ ವಸ್ತುಗಳು ಮತ್ತು ಬಿ.ಮಿಲ್ ಮಾರಾಟ ಸಂಬಂಧ ಸಮಿತಿ ರಚಿಸಿ ಖಾಸಗಿ ಸಂಸ್ಥೆಯಿಂದ ಅವುಗಳ ಮೌಲ್ಯ ಮಾಪನ ಮಾಡಿಸಬೇಕು ಆದರೆ ಈ ಪ್ರಕರಣದಲ್ಲಿ ಎಂಜಿನಿಯರಿಗ್ ಕಾಲೇಜೊಂದರಿಂದ ಪತ್ರ ಪಡೆದು ಮಾರಾಟ ಮಾಡಲಾಗಿದೆ. ಇದಕ್ಕೆ ಯಾವ ರೈತರು ಷೇರುದಾರರ ಒಪ್ಪಿಗೆ ಪಡೆಯದೇ ಮಾರಾಟ ಮಾಡಿದ್ದಾರೆ ಎಂದು ದೂರಿದರು. ತಮಗೆ ಬೇಕಾದ ಟೆಂಡರ್‌ದಾರರಿಂದ ಬಿಡ್ ಹಾಕಿಸಿದ್ದಾರೆ.

ಯಾವುದೇ ಮೌಲ್ಯ ನಿಗದಿ ಮಾಡದೇ ಬಿಡ್‌ನಲ್ಲಿ ಭಾಗವಹಿಸಿದ ಒಬ್ಬರಿಗೆ ಸುಮಾರು 10ರಿಂದ 12 ಕೋಟಿ ಮೌಲ್ಯದ ವಸ್ತುಗಳನ್ನು 4.05 ಕೋಟಿ ರೂಗಳಿಗೆ ನೀಡಿದ್ದಾರೆ. ಇದು ಸೇರಿದಂತೆ ಕಾರ್ಖಾನೆಗೆ ಬಂದ ಅನುದಾನ, ಅದರ ಬಳಕೆ, ಕಾರ್ಖಾನೆಗೆ ಆದ ನಷ್ಟ, ಅಲ್ಲಿನ ವಸ್ತುಗಳ ಮಾರಾಟದ ಬಗ್ಗೆ ಶ್ವೇತಪತ್ರ ಹೊರಡಿಸಬೇಕು ಎಂದು ಒತ್ತಾಯಿಸಿದರು. ರಾಜಕೀಯ ಹಿನ್ನಲೆಯ ವ್ಯಕ್ತಿಗಳನ್ನು ಮೈಶುಗರ್‌ಗೆ ಅಧ್ಯಕ್ಷರನ್ನಾಗಿ ನೇಮಿಸದಿರಲು ಹೈಕೋರ್ಟ್ ತಿಳಿಸಿದೆ.

ಆದರೂ ಸಿ.ಡಿ.ಗಂಗಾಧರ್ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಜಿಲ್ಲಾ ಮಂತ್ರಿ, ಕ್ಷೇತ್ರದ ಶಾಸಕರು ಮೈಶುಗರ್‌ನ ಅವ್ಯವಹಾರಗಳ ಬಗ್ಗೆ ಏಕೆ ಮಾತನಾಡುತ್ತಿಲ್ಲ. ಈ ಸಂಬಂಧ ಕೂಡಲೇ ಸಭೆ ಕರೆಯಲು ಕೋರಿದರು. ಮೈಶುಗರ್ ವ್ಯಾಪ್ತಿಯ 110 ಹಳ್ಳಿಗಳಿಗೆ ಭೇಟಿ ನೀಡಿ ಅವ್ಯವಹಾರ ಸಂಬಂಧ ಅರಿವು ಮೂಡಿಸಲಾಗುವುದು. ಜತೆಗೆ ಇಲ್ಲಿನ ಅವ್ಯವಹಾರಗಳ ಕುರಿತು ಸಭೆ ನಡೆಸಿ, ಕರಪತ್ರಗಳನ್ನು ವಿತರಿಸಿ ಜಾಗೃತಿ ಮೂಡಿಸಲಾಗುವುದು ಎಂದು ಎಚ್ಚರಿಸಿದರು. ಗೋಷ್ಠಿಯಲ್ಲಿ ಸಮಿತಿಯ ಅಣ್ಣೇಗೌಡ, ಎಂ.ಆನಂದಕುಮಾರ್, ಎನ್.ಎಲ್.ಭರತ್‌ರಾಜ್, ಎಚ್.ಡಿ.ಜಯರಾಂ, ಎನ್.ರಾಜೇಂದ್ರಸಿಂಗ್‌ಬಾಬು ಇತರರಿದ್ದರು.

# ಸುರೇಶ್ ಗೌಡ ಹೇಳಿಕೆಗೆ ರಾಜೇಶ್ ಸವಾಲು

**ಮಂಡ್ಯ:** ಮಾಜಿ ಶಾಸಕ ಕೆ.ಸುರೇಶ್‌ಗೌಡ ಜಿಲ್ಲಾ ಉಸ್ತುವಾರಿ ಮಂತ್ರಿಗಳ ನಾಲಿಗೆ ಕತ್ತರಿಸುವ ಹೇಳಿಕೆ ನೀಡಿದ್ದು, ಮೊದಲು ನಮ್ಮ ನಾಲಿಗೆ ಕತ್ತರಿಸಲು ಅವರು ಹೇಳಿದ ಸ್ಥಳಕ್ಕೆ ಬರುವುದಾಗಿ ನಾಗಮಂಗಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಜೇಶ್ ಸವಾಲೆಸೆದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರೌಡಿಸಂ ಮಾಡುವ ರೀತಿಯಲ್ಲಿ ಸಚಿವ ಚಲುವರಾಯಸ್ವಾಮಿ ಅವರ ನಾಲಗೆ ಕತ್ತರಿಸುವ ಹೇಳಿಕೆಯನ್ನು ಸುರೇಶ್‌ಗೌಡ ಅವರು ನೀಡಿದ್ದಾರೆ. ಪ್ರಸ್ತುತ ಆತನಿಗೆ ಅವರ ಪಕ್ಷದಿಂದ ವಿಧಾನಸಭೆಯ ಟಿಕೆಟ್ ದೊರೆಯುವುದಿಲ್ಲ ಎಂಬ ಕಾರಣಕ್ಕೆ ಅವರ ವರಿಷ್ಠರನ್ನು ಮೆಚ್ಚಿಸಲು ಇಂತಹ ಹೇಳಿಕೆ ನೀಡಿದ್ದಾರೆ ಎಂದು ಕಿಡಿ ಕಾರಿದರು.

ಈಗಾಗಲೇ ಜಿಲ್ಲೆಯಲ್ಲಿ ಅವರ ಪಕ್ಷದ ಒಂದು ವರ್ಗ ಸಿ.ಎಸ್.ಪುಟ್ಟರಾಜು ವಿರುದ್ಧ ಹಾಗೂ ಮತ್ತೊಂದು ವರ್ಗ ಸುರೇಶ್‌ಗೌಡ ವಿರುದ್ಧ ಟಿಕೆಟ್ ತಪ್ಪಿಸುವ ಕೆಲಸ ಮಾಡುತ್ತಿದೆ. ಡಿ.ಕೆ.ಶಿವಕುಮಾರ್ ಸಿಎಂ ಆಗುತ್ತಿರುವ ಹಿನ್ನಲೆ ಕುಮಾರಸ್ವಾಮಿ ಅವರ ಮನೆಯಲ್ಲಿ ಸೂತಕದ ಛಾಯೇ ಆವರಿಸಿದೆ ಎಂದು ಹೇಳಿದ್ದರ ಪರ–ವಿರೋಧದ ಹೇಳಿಕೆಯನ್ನು ಕುಮಾರಸ್ವಾಮಿ ಅಥವಾ ದೇವೇಗೌಡರು ನೀಡಬೇಕು. ಅದನ್ನು ಬಿಟ್ಟು ಈ ರೀತಿಯ ಹೇಳಿಕೆ ನೀಡುವುದು ಸರಿಯಲ್ಲ ಎಂದು ಖಂಡಿಸಿದರು.

ನಾಲಿಗೆಯನ್ನು ಕತ್ತರಿಸುವುದಾಗಿ ಸುರೇಶ್‌ಗೌಡ ಹೇಳಿದ್ದು, ಅವರಿಗೆ ತಾಕತ್ತಿದ್ದರೆ ಜಿಲ್ಲೆಯ ಎಲ್ಲಿಗೆ ಬೇಕಾದರೂ ಕರೆದು ನಾಲಿಗೆ ಕತ್ತರಿಸಲಿ. ಅವರು ಕತ್ತಿರಿಸುವುದೇ ಆದರೆ ದೇವೇಗೌಡ, ಕುಮಾರಸ್ವಾಮಿ ಹಾಗೂ ನಿಮ್ಮ ವಿರುದ್ಧವು ಮಾತನಾಡುತ್ತೇವೆ. ಎಲ್ಲಿಗೆ ಬರಬೇಕು ಹೇಳಿ ನಾವು ಬರುತ್ತೇವೆ ಎಂದು ಸವಾಲೆಸೆದರು.

ಮೋದಿ ಮತ್ತೊಮ್ಮೆ ಪ್ರಧಾನಿಯಾದರೆ ದೇಶ ಬಿಡುವುದಾಗಿ ಹೇಳಿದ ದೇವೇಗೌಡರು ದೇಶ ಬಿಡಲಿಲ್ಲ. ಪೆನ್‌ಡ್ರೈವ್ ಬಿಡುಗಡೆ ಮಾಡುವುದಾಗಿ ಹೇಳಿದ ಕುಮಾರಸ್ವಾಮಿ ಅವರು ಹಾಸನದಲ್ಲಿ ಬಿಡುಗಡೆ ಮಾಡಿದ್ದಾರೆ. ಸಂಸತ್ತಿಗೆ ಆಯ್ಕೆಯಾದ 24 ಗಂಟೆಯಲ್ಲಿ ಮೇಕೆದಾಟು ಜಾರಿ ಮಾಡುವುದಾಗಿ ಹೇಳಿದ್ದು, ಸುಳ್ಳಲ್ಲವೇ , ಕುಮಾರಸ್ವಾಮಿಗೆ ಸುಳ್ಳೇ ದೇವರ ಮನೆ ಎಂದು ಛೇಡಿಸಿದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್ ಮಾತನಾಡಿ, ಸೂತಕ ಎಂಬ ಹೇಳಿಕೆ ಸಾವಿಗೆ ಮಾತ್ರವಲ್ಲ, ಸಂಭ್ರಮಕ್ಕೂ ಸೂತಕದ ಹೆಸರಿದೆ. ಅದರ ಅರ್ಥ ಅರಿಯದ ಜೆಡಿಎಸ್ ಅಧ್ಯಕ್ಷ ಡಿ.ರಮೇಶ್ ಶಾಸಕರನ್ನು ಮಿಸ್ಟರ್ ಎನ್ನಲು ಏನು ಅರ್ಹತೆಯಿದೆ. ರಾಜಕೀಯವಾಗಿ ಚಲುವರಾಯಸ್ವಾಮಿ ಅವರ ಬಗ್ಗೆ ಮಾತನಾಡಲು ಇವರ ಅರ್ಹತೆ ಇಲ್ಲ ಎಂದು ಖಂಡಿಸಿದರು.

ಎಂಡಿಸಿಸಿ ಬ್ಯಾಂಕ್‌ನ ಚುನಾವಣೆಗೆ ಪಕ್ಷದಿಂದ ಅರ್ಜಿಯನ್ನೂ ಹಾಕಿಸಲು ಸಾಧ್ಯವಾಗದ ಡಿ.ರಮೇಶ್ ಹಾಗೂ ಸುರೇಶ್‌ಗೌಡ ಬರಿ ಓಲೈಕೆಯ ರಾಜಕಾರಣ ಮಾಡುತ್ತಿದ್ದಾರೆ. ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿಗಳು ಹಾಗೂ ನಾಯಕರ ಬಗ್ಗೆ ಮಾಡನಾಡಲು ಡಿ.ರಮೇಶ್ ಯಾರು, ಅವರಿಗೇಕೆ ನಮ್ಮ ಪಕ್ಷದ ವಿಚಾರ ಎಂದು ಪ್ರಶ್ನಿಸಿದ ಅವರು, ಕಾಂಗ್ರೆಸ್ ಪಕ್ಷದ ಬಗ್ಗೆ ಮಾತನಾಡುವಾಗ ಎಚ್ಚರಿಕೆಯಿಂದ ಮಾತನಾಡುವಂತೆ ತಿಳಿಸಿದರು.

ಗೋಷ್ಠಿಯಲ್ಲಿ ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ಶರತ್ ರಾಮಣ್ಣ, ದಿವಾಕರ್, ಎಂಡಿಸಿಸಿ ನಿರ್ದೇಶಕ ಅಶೋಕ್, ದಿನೇಶ್ ಇತರರಿದ್ದರು.

# ಸಚಿವ ಈಶ್ವರ ಖಂಡ್ರೆ ಅವರಿಗೆ ಉಪಮುಖ್ಯಮಂತ್ರಿ ಸ್ಥಾನಕ್ಕೆ ಒತ್ತಾಯ



**ಮಂಡ್ಯ:** ಶಾಸಕರು ಹಾಗೂ ಮಾಜಿ ಸಚಿವರಾದ ಈಶ್ವರ ಖಂಡ್ರೆ ಅವರಿಗೆ ಕಾಂಗ್ರೆಸ್ ಸರಕಾರದಲ್ಲಿ ಉಪಮುಖ್ಯಮಂತ್ರಿ ಸ್ಥಾನ ನೀಡುವಂತೆ ಅಖಿಲ ಭಾರತ ವೀರಶೈವಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ಎಸ್.ಆನಂದ್ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಶ್ವರ ಖಂಡ್ರೆ ಅವರು ಅಖಿಲ ಭಾರತ ವೀರಶೈವಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾಗಿ ಎಲ್ಲ ಸಮಾಜವನ್ನು ಒಗ್ಗೂಡಿಸಿಕೊಂಡು ಕೆಲಸ ಮಾಡುತ್ತಿದ್ದಾರೆ ಎಂದರು.

ವೀರಶೈವಲಿಂಗಾಯತ ಸಮುದಾಯ ವನ್ನು ಒಗ್ಗೂಡಿಸಿ ಕೊಂಡು ಅಭಿವೃದ್ಧಿಯ ಕಡೆಗೆ ಕೊಂಡೊಯ್ಯುತ್ತಿದ್ದಾರೆ. ಅವರ ತಂದೆಯವರ ಕಾಲದಿಂದಲೂ ಕಾಂಗ್ರೆಸ್ ಪಕ್ಷಕ್ಕೆ ನಿಷ್ಠೆಯಿಂದ ಸುಧೀರ್ಘ 30–35 ವರ್ಷಗಳಿಂದಲೂ ಅಧಿಕಾರದಲ್ಲಿದ್ದು ಎಲ್ಲ ವರ್ಗದ ಪರವಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದರು.

ಇವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಿದರೆ, ವೀರಶೈವ ಲಿಂಗಾಯತ ಸಮಾಜವ್ನನ ಒಗ್ಗೂಡಿಸಿ ಕಾಂಗ್ರೆಸ್ ಪಕ್ಷ ಹಾಗೂ ಹೈಕಮಾಂಡ್ ಮಟ್ಟದ ಎಲ್ಲ ನಾಯಕರಿಗೆ ಒಳ್ಳೆಯ ಹೆಸರು ತರುವಂತಹ ಕೆಲಸ ಮಾಡುತ್ತಾರೆ ಎಂದರು. ಗೋಷ್ಠಿಯಲ್ಲಿ ಮಹಾಸಭಾದ ಸದಸ್ಯ ಜಗದೀಶ್, ಜಿಲ್ಲಾ ಬಸವ ಸಮಿತಿಯ ಕೆಂಪಯ್ಯ, ಮುಖಂಡರಾದ ಆಲಕೆರೆ ಗುಳ್ಳಪ್ಪ, ಮಹೇಶ್, ನಾಗರಾಜು ಇದ್ದರು.

# ಗ್ರಾಮೀಣ ಪತ್ರಕರ್ತರ ಬಸ್ ಪಾಸ್ ಷರತ್ತುಗಳನ್ನು ಸರಳೀಕರಣ ಮಾಡಿ ಆದೇಶ

## ಕೆಯುಡಬ್ಲ್ಯೂಜೆ ಸ್ವಾಗತ

**ಬೆಂಗಳೂರು:** ಗ್ರಾಮೀಣ ಪತ್ರಕರ್ತರ ಉಚಿತ ಬಸ್ ಪಾಸ್ ಯೋಜನೆ ಜಾರಿಗೆ ಅಡ್ಡಿಯಾಗಿದ್ದ ಕಠಿಣ ಷರತ್ತುಗಳನ್ನು ತೆಗೆದು, ನಿಯಮಾವಳಿ ಸರಳೀಕರಣ ಮಾಡಿ ಸರ್ಕಾರ ಆದೇಶ ಹೊರಡಿಸಿದ್ದು, ಕೆಯುಡ ಬ್ಲ್ಯೂಜೆ ಸ್ವಾಗತಿಸಿದೆ.

ಬೀದರನಲ್ಲಿ ನಡೆದ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯೂಜೆ) ಒತ್ತಾಯಕ್ಕೆ ಸ್ಪಂಧಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅದೇ ವೇದಿಕೆಯಲ್ಲಿ ಕಠಿಣ ಷರತ್ತುಗಳನ್ನು ಕೈಬಿಡುವುದಾಗಿ ಭರವಸೆ ನೀಡಿದ್ದರು.

ಸರ್ಕಾರಕ್ಕೆ ಮೂರು ವರ್ಷ ತುಂಬಿದಾಗ ಕೆಯುಡಬ್ಲ್ಯೂಜೆ ಏರ್ಪಡಿಸಿದ್ದ ಸಂವಾದದಲ್ಲಿ ಭಾಗವಹಿಸಿದ್ದ ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅವರು ಈ ಬಗ್ಗೆ ವಾರದೊಳಗೆ ಕ್ರಮ ವಹಿಸುವುದಾಗಿ ತಿಳಿಸಿದ್ದರು. ಸಿಎಂ ಸೂಚನೆ ಮೇರೆಗೆ ಹೊಸ ಆದೇಶ ಹೊರಬಿದ್ದಿದೆ.

ಪೂರ್ಣಾವಧಿಗೆ ಸೀಮಿತವಾಗಿದ್ದನ್ನು ಬದಲಿಸಿ, ಅರೆಕಾಲಿಕ ವರದಿಗಾರರಿಗೂ ಯೋಜನೆ ವಿಸ್ತರಿಸಲಾಗಿದೆ.

ಸೌಲಭ್ಯ ಪಡೆಯಲು 11 ತಿಂಗಳ ಲೈನೇಜ್ ಪಡೆದಿರುವ ಬ್ಯಾಂಕ್ ಸ್ಟೇಟ್ ಮೆಂಟ್ ಕಡ್ಡಾಯವಾಗಿದ್ದನ್ನು ಷರತ್ತಿನಲ್ಲಿ ಕೈಬಿಡಲಾಗಿದೆ.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯೂಜೆ) ಸತತ ಹೋರಾಟಕ್ಕೆ ಸ್ಪಂಧಿಸಿ ಬೇಡಿಕೆ ಈಡೇರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ (ಭಾವಿ ಸಿಎಂ) ಡಿ.ಕೆ.ಶಿವಕುಮಾರ್ ಅವರು ಈ ನಿಟ್ಟಿನಲ್ಲಿ ಸತತವಾಗಿ ಸ್ಪಂಧಿಸಿದ ಸಿಎಂ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್ ಅವರಿಗೆ ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಅವರು ಅಭಿನಂದನೆ ಸಲ್ಲಿಸಿದ್ದಾರೆ.

# ವಿಶ್ವ ಹಾಲು ದಿನಾಚರಣೆ: ನಂದಿನಿ ಉತ್ಪನ್ನಗಳನ್ನು ವಿತರಣೆ

**ಕೆ ಆರ್ ಪೇಟೆ:** ವಿಶ್ವ ಹಾಲು ದಿನಾಚರಣೆ ಅಂಗವಾಗಿ ಮಂಡ್ಯ ಜಿಲ್ಲಾ ಹಾಲು ಒಕ್ಕೂಟ (ಮನ್ಮುಲ್)ದ ವತಿಯಿಂದ ಪಟ್ಟಣದ ದುಂಡ ಶೆಟ್ಟಿ ಲಕ್ಷ್ಮಮ್ಮ ಸಾರ್ವಜನಿಕ ಆಸ್ಪತ್ರೆಯ ರೋಗಿಗಳಿಗೆ ಹಾಗೂ ಸಿಬ್ಬಂದಿಗಳಿಗೆ ಹಾಗೂ ಚಿಕ್ಕೋನಹಳ್ಳಿ ಪುರ ಸಮೀಪವಿರುವ ಮಾತೃಭೂಮಿ ವೃದ್ಧಾಶ್ರಮದಲ್ಲಿರುವ ಅನಾಥರಿಗೆ ಮನ್ಮುಲ್ ನಿರ್ದೇಶಕ ಡಾಲು ರವಿ ನೇತೃತ್ವದಲ್ಲಿ ಹಾಗೂ ಮನ್ಮುಲ್ ಅಧಿಕಾರಿಗಳು ನಂದಿನಿ ಗುಡ್ ಲೈಫ್ ಹಾಲಿನ ಪುಡಿ,ರಸ್ಕ್,ಬಿಸ್ಕತ್ತು ಲಸ್ಸಿ,ಸ್ವೀಟ್ಸ್ ಸೇರಿದಂತೆ ಇತರ ನಂದಿನಿ ಉತ್ಪನ್ನಗಳನ್ನು ವಿತರಣೆ ಮಾಡಿದರು.



ಬಳಿಕ ಮಾತನಾಡಿದ ಮನ್ಮುಲ್ ನಿರ್ದೇಶಕ ಡಾಲು ರವಿ ಪ್ರತಿವರ್ಷವೂ ವಿಶ್ವ ಹಾಲಿನ ದಿನವನ್ನು ಮನ್ಮುಲ್ ವತಿಯಿಂದ ಆಚರಣೆ ಮಾಡುತ್ತಾ ಬರುತ್ತಿದ್ದೇವೆ.ವಿಶ್ವ ಹಾಲಿನ ದಿನದ ಅಂಗವಾಗಿ ಪಟ್ಟಣದ ಶ್ರೀ ದುಂಡಶೆಟ್ಟಿ ಲಕ್ಷ್ಮಮ್ಮ ಸಾರ್ವಜನಿಕ ಆಸ್ಪತ್ರೆಯ ಒಳರೋಗಿಗಳಿಗೆ ನಂದಿನಿ ಹಾಲಿನಿಂದ ತಯಾರಿಸುವ ಉತ್ಪನ್ನಗಳನ್ನು ವಿತರಣೆ ಮಾಡುವುದಲ್ಲದೇ ಮಾತೃಭೂಮಿ ವೃದ್ಧಾಶ್ರಮದಲ್ಲಿರುವ ಅನಾಥರಿಗೆ ವೈಯುಕ್ತಿಕವಾಗಿ ಮಾಂಸದ ಊಟವನ್ನು ವ್ಯವಸ್ಥೆ ಮಾಡುವುದಲ್ಲದೇ ನಂದಿನಿ ಹಾಲಿನಿಂದ ತಯಾರಿಸಲಾಗುವ ಉತ್ಪನ್ನಗಳನ್ನು ಉಚಿತವಾಗಿ ನೀಡಲಾಗುತ್ತದೆ.ಇದರ ಉದ್ದೇಶವೇನೆಂದರೆ ಹಾಲು ಪೌಷ್ಟಿಕಾಂಶಗಳಿಂದ ಕೂಡಿದ ಪಾನೀಯವಾಗಿದ್ದು ಒಟ್ಟಾರೆ ಯೋಗಕ್ಷೇಮಕ್ಕೆ ಅಗತ್ಯವಾದ ಜೀವಸತ್ವಗಳು ಮತ್ತು ಖನಿಜಗಳನ್ನು ಒದಗಿಸುತ್ತದೆ. ಕ್ಯಾಲ್ಸಿಯಂನ ಅತ್ಯುತ್ತಮ ಮೂಲವಾಗಿದ್ದು ಇದು ಬಲವಾದ ಮೂಳೆಗಳು ಮತ್ತು ಹಲ್ಲುಗಳನ್ನು ಬೆಂಬಲಿಸುತ್ತದೆ. ಸ್ನಾಯುಗಳ ದುರಸ್ತಿ ಮತ್ತು ಬೆಳವಣಿಗೆಗೆ ಅಗತ್ಯವಾದ ಉತ್ತಮ ಗುಣಮಟ್ಟದ ಪ್ರೋಟೀನ್ ನ್ನು ಸಹ ಪೂರೈಸುತ್ತದೆ. ಹೆಚ್ಚುವರಿಯಾಗಿ ಹಾಲಿನಲ್ಲಿ ವಿಟಮಿನ್ ಡಿ ಪೊಟ್ಯಾಸಿಯಮ್ ಮತ್ತು ಬಿ ಜೀವಸತ್ವಗಳಿವೆ.ಹೃದಯ ರಕ್ತನಾಳದ ಆರೋಗ್ಯ ಮತ್ತು ಶಕ್ತಿಯ ಚಯಾಪಚಯ ಕ್ರಿಯೆಗೆ ಕೊಡುಗೆ ನೀಡುತ್ತದೆ. ನಿಯಮಿತ ಸೇವನೆಯು ಆರೋಗ್ಯಕರ ತೂಕವನ್ನು ಕಾಪಾಡಿಕೊಳ್ಳಲು ಜಲಸಂಚಯನವನ್ನು ಸುಧಾರಿಸಲು ಮತ್ತು ರೋಗ ನಿರೋಧಕ ಕಾರ್ಯವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ.ಆದ್ದರಿಂದ ಪ್ರತಿಯೊಬ್ಬರೂ ಆರೋಗ್ಯದ ದೃಷ್ಟಿಯಿಂದ ಪ್ರತಿನಿತ್ಯ ನಿಯಮಿತವಾಗಿ ಹಾಲನ್ನು ಸೇವನೆ ಮಾಡುವಂತೆ ಮನ್ಮುಲ್ ನಿರ್ದೇಶಕ ಡಾಲು ರವಿ ತಿಳಿಸಿದರು.

ಈ ಸಮಯದಲ್ಲಿ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಮಂಜುಳಾ, ಮನ್ಮುಲ್ ಉಪ ವ್ಯವಸ್ಥಾಪಕ ಪ್ರಸಾದ್, ರವಿ,ಮಾನ್ಸಿಂಗ್, ಮನ್ಮುಲ್ ಮಾರ್ಗ ವಿಸ್ತರಣಾಧಿಕಾರಿಗಳಾದ ನಾಗಪ್ಪ ಅಲ್ಲಿಬಾದಿ, ಮಧು,ಜಗದೀಶ್, ಭಾವನಾ,ಸಂಧ್ಯಾ,ಪಲ್ಲವಿ, ರಾಘವೇಂದ್ರ, ಅನಾಥ ಆಶ್ರಮದ ವ್ಯವಸ್ಥಾಪಕ ನಾಗಣ್ಣ, ಕೈಗೋನಹಳ್ಳಿ ಜಯರಾಂ ಸೇರಿದಂತೆ ಇತರರು ಹಾಜರಿದ್ದರು.

*ವರದಿ,ಎಸ್ ರವಿ ಹೊನ್ನೇನಹಳ್ಳಿ*

# ಪುಸ್ತಕಗಳನ್ನು ಓದಿದಾಗ ಮನಸ್ಸು ಉಲ್ಲಾಸ, ವಿಶಾಲ : ಪ್ರೊ. ಜಯಪ್ರಕಾಶ್ ಗೌಡ

**ಮಂಡ್ಯ:** ಓದದೆಯೂ ರಾಮಾಯಣ, ಮಹಾಭಾರತದಂತಹ ಮಹಾ ಕಾವ್ಯಗಳನ್ನು ನಮ್ಮ ಹಳ್ಳಿಗರು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ. ನಿತ್ಯ ನಡೆಯುತ್ತಿದ್ದ ಪಾರಾಯಣ ಕೇಳಿ ಮನನ ಮಾಡಿಕೊಂಡಿದ್ದಾರೆ. ಆದರೆ, ಓದಿನ ಪ್ರಯೋಜನ ಅಪಾರ ಎಂದು ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ. ಜಯಪ್ರಕಾಶ್ ಗೌಡ ಅಭಿಪ್ರಾಯಪಟ್ಟರು.

**ಮನಸ್ಸು ಅರಳಿಸುವ ಓದಿನ ಪ್ರಯೋಜನ ಅಪಾರ**

ಜೂನ್ 1ರ ರ ಸಂಜೆ ಅನ್ನಪೂರ್ಣೇಶ್ವರಿ ನಗರದ ನಿವಾಸಿ ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಚಿಕ್ಕಸ್ವಾಮಿ ಅವರ ನಿವಾಸ ಮೌರ್ಯ ಸದನದ ವಿಶ್ವಮಾನವ ಸಭಾಂಗಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಪುಸ್ತಕ ಪ್ರಾಧಿಕಾರ ಹಾಗೂ ಜಿಲ್ಲಾ ಜಾಗೃತ ಸಮಿತಿ ಸಂಯುಕ್ತಾಶ್ರಯದಲ್ಲಿ ಅವರ 63ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಏರ್ಪಡಿಸಲಾಗಿದ್ದ ?ಮನೆಗೊಂದು ಗ್ರಂಥಾಲಯ ಅನುಷ್ಠಾನ? ಸಮಾರಂಭ ಉದ್ಘಾಟಿಸಿ ಮಾತನಾಡಿದರು.



ಓದುವುದೂ ಒಂದು ಕ್ರಮ. ಕಂಠಪಾಠ ಮಾಡುವುದರಿಂದ ಉಚ್ಚಾರಣೆಯ ದೋಷ ಕಡಿಮೆಯಾಗುತ್ತದೆ. ಓದಿದಾಗ ಮನಸ್ಸು ಉಲ್ಲಾಸಗೊಂಡು ಆದ್ರಗೊಳ್ಳುತ್ತದೆ. ಸಂಸ್ಕಾರ, ವಿಶಾಲ ಮನೋಭಾವ ಬೆಳೆಯುವುದು ಎಂದು ತಿಳಿಸಿದರು.

ಮೊಬೈಲನ್ನು ಏಕೆ ಬಳಸಬೇಕು, ಎಷ್ಟು ಬಳಸಬೇಕು. ಊಟ ಹೇಗೆ ಮಾಡಬೇಕು. ನಡೆ ನುಡಿ ಹೇಗಿರಬೇಕು, ಜೀವನ ನಿರ್ವಹಿಸುವುದು ಹೇಗೆ ಮುಂತಾದ ವಿಷಯಗಳನ್ನು ಕಲಿಸುವುದೇ ಪುಸ್ತಕಗಳು. ಓದಿನ ಮೂಲಕ ಪಡೆಯುವ ಹರಿವು ಬಹಳ ಮುಖ್ಯ ಎಂದು ಹೇಳಿದರು.

ಓದಿನ ಶಕ್ತಿಯನ್ನು ಅರಿತಿದ್ದ ದಾನ ಚಿಂತಾಮಣಿ ಅತ್ತಿಮಬ್ಬೆ 1000 ಹಸ್ತ ಪ್ರತಿಗಳನ್ನು ಬರೆಯಿಸಿ ಹಂಚಿದ್ದು, ಅಂದಿನ ಕಾಲದಲ್ಲಿ ಓದಿಗೆ ನೀಡಿದ ಮಹತ್ವವನ್ನು ಸಾರುತ್ತದೆ. ಪುಸ್ತಕಗಳನ್ನು ಶೋಕೇಸ್ ನಲ್ಲಿ ಇಟ್ಟು ಬೀಗ ಹಾಕುವುದಲ್ಲ. ವೀಣೆಯನ್ನು ಮನೆಯಲ್ಲಿ ಇಟ್ಟು ಸುಮ್ಮನೆ ಮೀಟಿದರೂ, ಪುಸ್ತಕಗಳನ್ನು ಸವರಿದರೂ ಹಿತಾನುಭವ ನೀಡುತ್ತದೆ ಎಂದು ತಿಳಿಸಿದರು.

ಮಂಡ್ಯ ವಿಶ್ವವಿದ್ಯಾನಿಲಯ ಕನ್ನಡ ಉಪನ್ಯಾಸಕ ಉಮೇಶ್ ದಡಮಹಳ್ಳಿ 'ನಾ ಮೆಚ್ಚಿದ ಪುಸ್ತಕ– ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಪರಿಸರದ ಕಥೆಗಳು' ಕುರಿತು ಮಾತನಾಡಿ, ಪ್ರಕೃತಿ ನಾಶವಾದರೆ ಪ್ರಾಣಿ ಸಂಕುಲ, ಸಸ್ಯ ಸಂಕುಲ ಬದುಕುವುದಿಲ್ಲ ಎಂದು ಪ್ರತಿಪಾದಿಸಿದವರು ತೇಜಸ್ವಿ. ಪ್ರಕೃತಿಯ ಭಾಗ ಮನುಷ್ಯ ಎಂದು ಹೇಳುತ್ತಾ ಪರಿಸರದ ಕಥೆಗಳನ್ನು ಕಟ್ಟಿಕೊಟ್ಟರು ಎಂದು ತಿಳಿಸಿದರು.


ನಾಟಿ ಔಷಧಿ ಪದ್ಧತಿ ನಾಶಕ್ಕೆ ಜ್ಞಾನ ಹಂಚದ ನಾಟಿ ವೈದ್ಯರೇ ಕಾರಣ. ಮೌಢ್ಯಗಳು, ಕಂದಾಚಾರಗಳ ಗುಟ್ಟುಗಳನ್ನು ರಟ್ಟು ಮಾಡುತ್ತಾ ಜನರಿಗೆ ಹತ್ತಿರವಾದ ವಿಷಯಗಳ ಬಗ್ಗೆ ಬರೆಯುತ್ತಾ ಎಲ್ಲಾ ವಯೋಮಾನದವರಿಗೂ ಇಷ್ಟವಾಗುತ್ತಾರೆ ತೇಜಸ್ವಿ ಎಂದು ತಿಳಿಸಿದರು.

ಅಲಯನ್ಸ್ ಕೆ.ಟಿ. ಹನುಮಂತು ಅವರು ಮಾತನಾಡಿ, ಒಂದು ಲಕ್ಷ ಮನೆಯಲ್ಲಿ ಗ್ರಂಥಾಲಯ ಅನುಷ್ಠಾನ ಒಳ್ಳೆಯ ಕಾರ್ಯಕ್ರಮ. ಓದುಗರನ್ನು ಸೆಳೆಯುವ, ಓದುವ ಸಂಸ್ಕೃತಿಯನ್ನು ಹೆಚ್ಚಿಸುವ ಕೆಲಸ ಇದರಿಂದ ಆಗುತ್ತದೆ. ಪ್ರತಿನಿತ್ಯ 1 ಗಂಟೆ ಕಾಲ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು. ಅಧ್ಯಕ್ಷತೆ ವಹಿಸಿದ್ದ ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಚಿಕ್ಕಸ್ವಾಮಿ ಮಾತನಾಡಿ, ಓದುವ ಸಂಸ್ಕಾರ ಬಾಲ್ಯದಲ್ಲಿಯೇ ಆಗಬೇಕು. ಓದುವ ಸಂಸ್ಕೃತಿ ಕಡಿಮೆಯಾಗಿರುವ ಈ ಸಂದರ್ಭದಲ್ಲಿ ಮನೆಗೊಂದು ಗ್ರಂಥಾಲಯ ಅನುಷ್ಠಾನ ಚಳವಳಿಯೇ ಆಗಬೇಕು ಎಂದು ಆಶಿಸಿದರು.

ಜಿಲ್ಲಾ ಜಾಗೃತ ಸಮಿತಿ ವತಿಯಿಂದ ಚಿಕ್ಕಸ್ವಾಮಿ ದಂಪತಿಯನ್ನು ಅಭಿನಂದಿಸಲಾಯಿತು. ಸಮಿತಿ ಸಂಚಾಲಕ ಕಾರಸವಾಡಿ ಮಹದೇವ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಮಿತಿಯ ಸದಸ್ಯರಾದ ಡಾ. ಎಂ. ಕೆಂಪಮ್ಮ, ಚಂದ್ರಶೇಖರ ದ.ಕೋ. ಹಳ್ಳಿ., ಮಂಚಶೆಟ್ಟಿ ಎಂ., ಸದ್ದಾಂ ತಗ್ಗಹಳ್ಳಿ, ಅನಿಲ್ ಬಾಬು ಉಪಸ್ಥಿತರಿದ್ದರು. ಕವಿ ಸಬ್ಬನಹಳ್ಳಿ ಶಶಿಧರ, ಡಾ. ಮಹೇಶ್ ಕೆ.ಎಂ., ನಾರಾಯಣಸ್ವಾಮಿ ಮತ್ತಿತರರು ಭಾಗವಹಿಸಿದ್ದರು.

# ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷರಾಗಿ ಎಂ.ನಂದೀಶ್ ಆಯ್ಕೆ

**ಮಂಡ್ಯ:** ಮಂಡ್ಯ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷರಾಗಿ ಶ್ರೀರಂಗಪಟ್ಟಣ ಪುರಸಭೆ ಮಾಜಿ ಸದಸ್ಯ ಹಾಗೂ ತಾಲೂಕು ಟಿಎಪಿಸಿಎಂಎಸ್ ನಿರ್ದೇಶಕರಾದ ಎಂ.ನಂದೀಶ್,ಉಪಾಧ್ಯಕ್ಷರಾಗಿ ಎಂ.ಪಿ.ಜ್ಯೋತಿ ಅವರು ಅವಿರೋಧವಾಗಿ ಆಯ್ಕೆಯಾದರು.



14 ಮಂದಿ ನಿರ್ದೇಶಕರಿರುವ ಜಿಲ್ಲಾ ಸಹಕಾರ ಒಕ್ಕೂಟದಲ್ಲಿ ಮಂಗಳವಾರ ನಡೆದ ಚುನಾವಣೆ ಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಎಂ.ನಂದೀಶ್,ಉಪಾಧ್ಯಕ್ಷ ಸ್ಥಾನಕ್ಕೆ ಎಂ.ಪಿ.ಜ್ಯೋತಿ ಹೊರತುಪಡಿಸಿ ಬೇರೆ ಯಾರು ನಾಮಪತ್ರ ಸಲ್ಲಿಸದ ಕಾರಣ ಚುನಾವಣಾ ಅಧಿಕಾರಿಯಾದ ಪಾಂಡವಪುರ ಉಪ ವಿಭಾಗದ ಸಹಾಯಕ ನಿಬಂಧಕರಾದ ನಾಗಭೂಷಣ್ ಹಾಗೂ ಮಂಡ್ಯ ಉಪ ವಿಭಾಗದ ಸಹಾಯಕ ನಿಬಂಧಕರಾದ ಅನಿತಾ ಅವರು ಇವರ ಅವಿರೋಧ ಆಯ್ಕೆಯನ್ನು ಘೋಷಣೆ ಮಾಡಿದರು.

ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಎಂ.ನಂದೀಶ್ ಮಾತನಾಡಿ ಸಹಕಾರ ಸಂಘಗಳಲ್ಲಿ ರಾಜಕಾರಣ ಸಲ್ಲದು ಎನ್ನುವ ಮುಖಾಂತರ ಎಲ್ಲರೂ ಒಟ್ಟಾಗಿ ಅವಿರೋಧವಾಗಿ ಅಧ್ಯಕ್ಷರಾಗಿ ಆಯ್ಕೆಯಾಗಲು ಒಳ್ಳೆಯ ಸಂದೇಶ ಕೊಟ್ಟಿದ್ದೀರಿ. ಸಹಕಾರಿ ಹಿರಿಯರು, ಸಹಕಾರಿ ವಿಚಾರ ಮಾಡಿ ಹೋರಾಟ ಮಾಡಿ ಬಂದಿರುವ ಎಲ್ಲಾ ಹಿರಿಯರ ಮಾರ್ಗದರ್ಶನ ಪಡೆದು ಜಿಲ್ಲಾ ಸಹಕಾರ ಒಕ್ಕೂಟವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಲು ಎಲ್ಲರ ಸಹಕಾರ ಬೇಕು ಎಂದು ಹೇಳಿದರು. ನನ್ನ ಸಾರ್ವಜನಿಕ ಜೀವನದಲ್ಲಿ ಎನಗಿಂತ ಕಿರಿಯರಿಲ್ಲ ಎನ್ನುವ ತತ್ವವನ್ನು ಅಳವಡಿಸಿಕೊಂಡು ಬಂದಿದ್ದೇನೆ.

ಶ್ರೀರಂಗಪಟ್ಟಣ ಪುರಸಭಾ ಸದಸ್ಯರಾಗಿ, ಶ್ರೀರಂಗಪಟ್ಟಣ ತಾಲೂಕು ಟಿಎಪಿಸಿಎಂಎಸ್ ಅಧ್ಯಕ್ಷರಾಗಿ ಹಾಲಿ ನಿರ್ದೇಶಕರಾಗಿ ಸಹಕಾರ ತತ್ವದ ಅಡಿ ಕೆಲಸ ಮಾಡುತ್ತಿದ್ದೇನೆ.ಮುಂದಿನ ದಿನಗಳಲ್ಲಿ ನಿಮ್ಮೆಲ್ಲರ ಮಾರ್ಗದರ್ಶನದೊಂದಿಗೆ ಜಿಲ್ಲಾ ಸಹಕಾರ ಒಕ್ಕೂಟದ ಅಭಿವೃದ್ಧಿಗೆ ಕೆಲಸ ಮಾಡುತ್ತೇನೆ ಎಂದು ಶುಭ ಹಾರೈಸಿದರು

ನೂತನವಾಗಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಎಂ.ನಂದೀಶ್ ಹಾಗೂ ಎಂ.ಪಿ.ಜ್ಯೋತಿ ಅವರನ್ನು ಜಿಲ್ಲಾ ಸಹಕಾರ ಒಕ್ಕೂಟದ ನಿರ್ದೇಶಕರಾದ ಎಚ್.ಎನ್.ಕೃಷ್ಣ,

ಆರ್.ಎಸ್.ಮಹೇಶ್, ಹೆಚ್.ಬಿ.ಚಂದ್ರು, ರಾಮಕೃಷ್ಣೆಗೌಡ, ಎಸ್.ಸೋಮಸುಂದರ್, ಡಿ.ಎಂ. ಮಹೇಂದ್ರ,ರಮೇಶ್‌ಕೆ.ಆರ್.,ರಘುನಂದನ್‌ಎಂಎಸ್, ಸಿ.ಶಿವಕುಮಾರ್, ಕೆ.ಎಲ್.ದೊಡ್ಡಲಿಂಗೇಗೌಡ, ಸಚಿನ್ ಚೆಲುವರಾಯಸ್ವಾಮಿ,ಎಸ್.ನಾಗೇಂದ್ರ, ಕಾರ್ಯಕರ್ತರು,ಹಿತೈಷಿಗಳು ಅಭಿನಂದಿಸಿ ಶುಭ ಕೋರಿದರು.

# ಶಾಲಾ ಪ್ರಾರಂಭೋತ್ಸವದ ಉದ್ಘಾಟಿಸಿದ ಸಿಇಓ ನಂದಿನಿ

**ಮಂಡ್ಯ:** ಮಂಡ್ಯ ನಗರದ ಗುತ್ತಲು ಬಡಾವಣೆಯಲ್ಲಿರುವ ಕೆ.ಪಿ.ಎಸ್. ಶಾಲೆಯಲ್ಲಿ ಆಯೋಜಿಸಲಾಗಿದ್ದ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮವನ್ನು ಮಂಡ್ಯ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನಂದಿನಿ ಕೆ.ಆರ್. ಅವರು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಹೊಸ ಶೈಕ್ಷಣಿಕ ವರ್ಷವನ್ನು ಉತ್ಸಾಹದಿಂದ ಆರಂಭಿಸಿ, ಶಿಕ್ಷಣದ ಜೊತೆಗೆ ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಮೂಲಕ ಜೀವನದಲ್ಲಿ ಯಶಸ್ಸು ಸಾಧಿಸಬೇಕು ಎಂದು ಕರೆ ನೀಡಿದರು. ಶಿಕ್ಷಣವು ಸಮಾಜದ ಅಭಿವೃದ್ಧಿಗೆ ಪ್ರಮುಖ ಅಡಿಪಾಯವಾಗಿದ್ದು, ಪ್ರತಿಯೊಬ್ಬ ವಿದ್ಯಾರ್ಥಿಯೂ ಶಾಲೆಯಲ್ಲಿ ದೊರೆಯುವ ಅವಕಾಶಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದು ತಿಳಿಸಿದರು.

ಕಳೆದ 2 ತಿಂಗಳಿಂದ ಶೈಕ್ಷಣಿಕ ಚಟುವಟಿಕೆಗಳಿಂದ ದೂರ ಉಳಿದಿದ್ದ ವಿದ್ಯಾರ್ಥಿಗಳು ಮರಳಿ ಶಾಲೆಗೆ ಮರಳಿದ್ದು, ಎಲ್ಲಾ ವಿದ್ಯಾರ್ಥಿಗಳು ಹೆಚ್ಚಿನ ಆಸಕ್ತಿಯಿಂದ ಶಾಲೆಗೆ ಆಗಮಿಸುವಂತೆ ತಿಳಿಸಿದರು. ವಿದ್ಯಾರ್ಥಿಗಳು ಈಗಿನಿಂದಲೇ ತಮ್ಮ ಭವಿಷ್ಯದ ಗುರಿಗಳನ್ನು ನಿಗದಿಪಡಿಸಿಕೊಂಡು ಆ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗುವಂತೆ ಕಿವಿ ಮಾತು ಹೇಳಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕಗಳನ್ನು ವಿತರಿಸಲಾಯಿತು. ಹೊಸ ಶೈಕ್ಷಣಿಕ ವರ್ಷದ ಅಂಗವಾಗಿ ವಿದ್ಯಾರ್ಥಿಗಳನ್ನು ಆತ್ಮೀಯವಾಗಿ ಸ್ವಾಗತಿಸಿ ಶುಭ ಹಾರೈಸಲಾಯಿತು.

ಕಾರ್ಯಕ್ರಮದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ (ಡಿಡಿಪಿಐ) ಲೋಕೇಶ್ ಜಿ., ಕ್ಷೇತ್ರ ಶಿಕ್ಷಣಾಧಿಕಾರಿ (ಬಿಇಒ) ಮಹದೇವ್ ಸೇರಿದಂತೆ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪೋಷಕರು ಉಪಸ್ಥಿತರಿದ್ದರು.



# ವಿಶ್ವ ಬೈಸಿಕಲ್ ದಿನ : ಸೈಕಲ್ ಮೇಲೊಂದು ರೌಂಡ್




ಇತ್ತೀಚೆಗೆ ದೂರದರ್ಶನದಲ್ಲಿ ಡಾ. ರಾಜ್ಕುಮಾರ್ ಅವರ ವಸಂತ ಗೀತೆ ಚಲನಚಿತ್ರ ಪ್ರಸಾರವಾಗುತ್ತಿತ್ತು. ಅದರಲ್ಲಿ ಅಣ್ಣಾವ್ರು ಸೈಕಲ್ ತುಳಿಯುತ್ತಾ, ವಿಶಿಷ್ಟ ಶೈಲಿಯಲ್ಲಿ ಹಾಯಾದ ಈ ಸಂಜೆ ಎಂದು ಹಾಡುವುದನ್ನು ನೋಡಿದಾಗ ಮನಸ್ಸು ಹಳೆಯ ದಿನಗಳಿಗೆ ಜಾರಿತು.

ನಾಗರ ಹಾವು ಚಿತ್ರದಲ್ಲಿ ಬುಲ್ ಬುಲ್ ಬರಾಕಿಲ್ವಾ ಅಂತ ಕೆಂಗಣ್ಣಿನಿಂದ ಕರೆದ ಜಲೀಲ ಅಂತನೆ ಪ್ರಖ್ಯಾತಿಯಾದ ಅಂಬರೀಶ್ ಜೊತೆ ಇದ್ದಿದ್ದು ಸೈಕಲ್.

ಅನಂತ್ ನಾಗ್ , ಲಕ್ಷ್ಮಿ ಜೋಡಿಯ ಬೆಂಕಿಯ ಬಲೆ ಚಿತ್ರದ ನಿನ್ನ ನಗುವು ಹೂವಂತೆ ಎಂದು ಸೈಕಲ್ ಮೇಲೆ ಹಾಡುವ ಹಾಡು ಇಂದಿಗೂ ಜನಪ್ರಿಯ .

**ಇಷ್ಟೆಲ್ಲಾ ಏಕೆ ಹೇಳ್ತಾ ಇದ್ದೇನೆ ಅಂದ್ರೆ ಇವತ್ತು :** ಜೂನ್ 3 ರಂದು ವಿಶ್ವ ಬೈಸಿಕಲ್ ದಿನ (World Bicycle Day) ಎಂದು ವಿಶ್ವ ಸಂಸ್ಥೆ ಘೋಷಿಸಿರುವುದು ನೆನಪಿಗೆ ಬಂತು. ನಮ್ಮ ಬದುಕಿನೊಂದಿಗೆ ಬಿಡಿಸಲಾರದಂತೆ ಬೆಸೆದುಕೊಂಡಿರುವ ಈ ಸೈಕಲ್ ಬಗ್ಗೆ ಬರೆಯಲೇಬೇಕು ಎನಿಸಿತು.


**ಸೈಕಲ್ : ಮತ್ತು 80ರ ದಶಕದ ಕೌಟುಂಬಿಕ ಆಸ್ತಿ:** ಕಳೆದ ಶತಮಾನದ ಎಪ್ಪತ್ತು ಮತ್ತು ಎಂಬತ್ತರ ದಶಕಗಳಲ್ಲಿ ಮಧ್ಯಮ ವರ್ಗದ ಭಾರತೀಯ ಕುಟುಂಬವೊಂದಕ್ಕೆ ಸೈಕಲ್ ಎನ್ನುವುದು ಕೇವಲ ಒಂದು ವಾಹನವಾಗಿರಲಿಲ್ಲ; ಅದೊಂದು ಹೆಮ್ಮೆಯ ಆಸ್ತಿಯಾಗಿತ್ತು. ಇಂದಿನ ಮನೆಗಳ ಮುಂದೆ ಕಾರು, ಬೈಕುಗಳು ನಿಲ್ಲುವ ಜಾಗದಲ್ಲಿ ಅಂದು ಅಂಗಳದ ಪ್ರಮುಖ ಸ್ಥಾನವನ್ನು ಸೈಕಲ್ ಆಕ್ರಮಿಸಿಕೊಳ್ಳುತ್ತಿತ್ತು.

ನಮ್ಮ ತಂದೆ, ಚಿಕ್ಕಪ್ಪ ಅಥವಾ ದೊಡ್ಡಪ್ಪಂದಿರು ತಮ್ಮ ದೈನಂದಿನ ಕಚೇರಿ ಕೆಲಸಗಳಿಗೆ, ತರಕಾರಿ ತರಲು ಅಥವಾ ಮಕ್ಕಳನ್ನು ಶಾಲೆಗೆ ಬಿಡಲು ಇದೇ ಸೈಕಲನ್ನು ಅವಲಂಬಿಸಿದ್ದರು. ಅಂದಿನ ದಿನಗಳಲ್ಲಿ ಸೈಕಲ್ ಹೊಂದುವುದೆಂದರೆ ಅದೊಂದು ಜವಾಬ್ದಾರಿಯ ಸಂಕೇತವಾಗಿತ್ತು. ಭಾನುವಾರ ಬಂತೆಂದರೆ ಸಾಕು, ಮನೆಯ ಹಿರಿಯರು ಸೈಕಲ್ ತೊಳೆಯಲು ಕುಳಿತುಕೊಳ್ಳುತ್ತಿದ್ದರು. ಹಳೆಯ ಬಟ್ಟೆಯಿಂದ ಅದನ್ನು ಒರೆಸಿ, ಚೈನ್ಗೆ ಎಣ್ಣೆ ಹಾಕಿ ಸಜ್ಜುಗೊಳಿಸುವುದೇ ಒಂದು ದೊಡ್ಡ ಹಬ್ಬದಂತಿರುತ್ತಿತ್ತು.

ಆ ದಿನಗಳಲ್ಲಿ ಸೈಕಲ್ ಒಂದು ತರಹ ರಠಠಫ ಛಿಚಿಡಿಡುಜಡಿ ಅನ್ನಬಹುದೇನೋ 70–80 ರ ದಶಕದವರೆಗೂ ಮನೆಯಲ್ಲಿ ಸೌದೆ ಅಡುಗೆ ಮತ್ತು ಬಿಸಿನೀರು ಕಾಯಿಸುವುದಕ್ಕೆ ಸೌದೆಯೇ ಬೇಕಾಗಿತ್ತು. ಎಲ್ಲ ಕಡೆ ಆಗ ಸೌದೆ ಡಿಪೊ ಇರ್ತಾ ಇತ್ತು, ಸೌದೆ ತರೋಕ್ಕೆ, ಗಿರಣಿಯಲ್ಲಿ ಹಿಟ್ಟು ಮಾಡಿಸೋಕ್ಕೆ , ಎಲ್ಲಕ್ಕೂ ಸೈಕಲ್ ಬೇಕೇ ಬೇಕಾಗಿತ್ತು.

**ಸೀಮೆಎಣ್ಣೆ ದೀಪ, ಡೈನಮೋ ಮತ್ತು ಅಲಂಕಾರದ ಗೀಳು**

ಅಂದಿನ ಸೈಕಲ್ಗಳ ರಚನೆ ಮತ್ತು ಅವುಗಳ ಮೇಲಿದ್ದ ಪ್ರೀತಿ ಅಪಾರ. ಎಪ್ಪತ್ತರ ದಶಕಕ್ಕಿಂತ ಮುಂಚಿನ ದಿನಗಳಲ್ಲಿ, ಅಂದರೆ ಡೈನಮೋ ಬರುವುದಕ್ಕೂ ಮೊದಲು ರಾತ್ರಿ ಸಂಚಾರಕ್ಕಾಗಿ ಸೈಕಲ್ಗಳಿಗೆ ವಿಶೇಷ ವಿನ್ಯಾಸದ ಸಣ್ಣ ಸೀಮೆಎಣ್ಣೆ ದೀಪಗಳನ್ನು (Kerosene Lamps) ಅಳವಡಿಸಲಾಗುತ್ತಿತ್ತು. ಗಾಳಿಗೆ ಆರಿಹೋಗದಂತೆ ಗಾಜಿನ ಕವಚವಿದ್ದ ಈ ದೀಪಗಳನ್ನು ಹ್ಯಾಂಡಲ್ ಅಥವಾ ಚಕ್ರದ ಮೇಲ್ಭಾಗದ ಕಡ್ಡಿಗೆ ಸಿಕ್ಕಿಸಲಾಗುತ್ತಿತ್ತು. ಅಂದಿನ ದಿನಗಳಲ್ಲಿ ರಾತ್ರಿ ವೇಳೆ ದೀಪವಿಲ್ಲದೆ ಸೈಕಲ್ ಓಡಿಸುವುದು ಕಾನೂನುಬಾಹಿರವಾಗಿತ್ತು; ನಿಯಮ ಮೀರಿದರೆ ಪೊಲೀಸರು ದಂಡ ಹಾಕುತ್ತಿದ್ದ ಅಥವಾ ಚಕ್ರದ ಗಾಳಿ ತೆಗೆಯುತ್ತಿದ್ದ ದಿನಗಳೂ ಇದ್ದವು.



ತದನಂತರದ ದಿನಗಳಲ್ಲಿ ಸೀಮೆಎಣ್ಣೆಯ ಜಂಜಾಟವನ್ನು ತಪ್ಪಿಸಲು ಚಕ್ರದ ಪಕ್ಕದಲ್ಲಿ ಡೈನಮೋ ಅಳವಡಿಸುವ ತಂತ್ರಜ್ಞಾನ ಜನಪ್ರಿಯವಾಯಿತು. ಚಕ್ರ ತಿರುಗಿದಾಗ ಉಂಟಾಗುವ ಘರ್ಷಣೆಯಿಂದ ವಿದ್ಯುತ್ ಉತ್ಪತ್ತಿಯಾಗಿ ಮುಂಭಾಗದ ದೀಪ ಬೆಳಗುತ್ತಿತ್ತು. ಸೈಕಲ್ ಚಲಾಯಿಸುವ ವೇಗದ ಮೇಲೆಯೇ ಬೆಳಕಿನ ತೀವ್ರತೆ ನಿರ್ಧಾರವಾಗುತ್ತಿತ್ತು!

ಅದರೊಂದಿಗೆ ಕಡ್ಡಾಯವಾಗಿ ಮುನಿಸಿಪಾಲಿಟಿಯಿಂದ ಪರವಾನಗಿ (Licensing)ಪಡೆದು, ಅದರ ಸಣ್ಣ ಲೋಹದ ಬಿಲ್ಲೆಯನ್ನು ಸೈಕಲ್ಗೆ ಸಿಕ್ಕಿಸಬೇಕಿತ್ತು. ಇನ್ನು ಸೈಕಲ್ ಹಿಂಭಾಗದ ಕ್ಯಾರಿಯರ್ ಮೇಲೆ ಇಡೀ ಸಂಸಾರವೇ ಪ್ರಯಾಣಿಸಬಹುದಿತ್ತು. ಸಣ್ಣ ಮಕ್ಕಳಿಗೆಂದೇ ಒಂದು ಬೇಬಿ ಸೀಟ್ ಇರುತ್ತಿತ್ತು . ಜನರು ತಮ್ಮ ಸೈಕಲ್ಗಳನ್ನು ಬಣ್ಣ ಬಣ್ಣದ ಪ್ಲಾಸ್ಟಿಕ್ ರಿಬ್ಬನ್ಗಳಿಂದ, ಸೀಟುಗಳಿಗೆ ವಿಶೇಷ ರೆಕ್ಸಿನ್ ಕವರ್ಗಳಿಂದ ಅಲಂಕರಿಸುತ್ತಿದ್ದರು. ಹ್ಯಾಂಡಲ್ಗೆ ಸಿಕ್ಕಿಸುತ್ತಿದ್ದ ಸಣ್ಣ ಕನ್ನಡಿ ಮತ್ತು ಜೋರಾಗಿ ಶಬ್ದ ಮಾಡುವ ಗಂಟೆಗಳು ಅಂದಿನ ಸೈಕಲ್ ಸವಾರರ ಗತ್ತನ್ನು ಹೆಚ್ಚಿಸುತ್ತಿದ್ದವು. ಹ್ಯಾಂಡಲ್ ಮುಂದೆ ಒಂದು ಸಣ್ಣ ಪುಸ್ತಕದ ಕ್ಯಾರಿಯರ್ ಕಾಲೇಜು ವಿದ್ಯಾರ್ಥಿಗಳ ಸ್ಟೇಟಸ್ ಮತ್ತು ಸ್ಟೈಲ್ ಸಿಂಬಲ್ ಆಗಿತ್ತು .

**ದೈನಂದಿನ ಬದುಕಿನ ಜೀವನಾಡಿ**

ನಮ್ಮ ಬಾಲ್ಯದ ದಿನಗಳನ್ನು ನೆನಪಿಸಿಕೊಂಡರೆ ಮುಂಜಾನೆ ಎಚ್ಚರವಾಗುತ್ತಿದ್ದುದೇ ಸೈಕಲ್ ಗಂಟೆಯ ಸಪ್ಪಳದಿಂದ.

**ಹಾಲು ಮತ್ತು ಪತ್ರಿಕೆ ವಿತರಕರು:** ಮುಂಜಾನೆ ನಾಲ್ಕುವರೆಗೇ ಸೈಕಲ್ ಕ್ಯಾರಿಯರ್ನ ಎರಡೂ ಬದಿಗೆ ಹಾಲಿನ ಕ್ಯಾನ್ಗಳನ್ನು ತೂಗಿಹಾಕಿಕೊಂಡು ಬರುವ ಹಾಲಿನವರು ಮತ್ತು ಮುಂಭಾಗದ ಬುಟ್ಟಿಯಲ್ಲಿ ಪತ್ರಿಕೆಗಳನ್ನು ಇಟ್ಟುಕೊಂಡು ಮನೆ ಮನೆಗೆ ಎಸೆಯುವ ಹುಡುಗರು ಅಂದಿನ ಸಮಾಜದ ಚಾಲಕ ಶಕ್ತಿಯಾಗಿದ್ದರು.

**ಅಂಚೆ ಅಣ್ಣ (ಪೋಸ್ಟ್ಮ್ಯಾನ್):** ಖಾಕಿ ಉಡುಪು ಧರಿಸಿ, ಸೈಕಲ್ ಮೇಲೆ ಬರುತ್ತಿದ್ದ ಅಂಚೆಯಣ್ಣ ದೂರದ ಊರಿನ ಬಂಧುಗಳ ಪತ್ರಗಳನ್ನು ತಂದಾಗ ಇಡೀ ಕುಟುಂಬದಲ್ಲಿ ಸಂತಸ ಮೂಡುತ್ತಿತ್ತು. ಸೈಕಲ್ ಎನ್ನುವುದು ಪ್ರತಿಯೊಬ್ಬರ ಜೀವನದ ಸುಖ–ದುಃಖಗಳನ್ನು ಹಂಚುವ ಮಾಧ್ಯಮವಾಗಿತ್ತು.

**ಬಾಡಿಗೆ ಸೈಕಲ್ ಮತ್ತು ಬಾಲ್ಯದ ಸಾಹಸಗಳು** : ಅಂದು ಎಲ್ಲರ ಮನೆಯಲ್ಲೂ ಸ್ವಂತ ಸೈಕಲ್ ಇರುತ್ತಿರಲಿಲ್ಲ. ಅಂತಹ ಸಂದರ್ಭದಲ್ಲಿ ಗಲ್ಲಿಯ ಮೂಲೆಯಲ್ಲಿದ್ದ ಸೈಕಲ್ ಶಾಪ್ ಗಳು ನಮಗೆ ಆಶಾಕಿರಣವಾಗಿದ್ದವು. ಗಂಟೆಗೆ ಇಂತಿಷ್ಟು ಪೈಸೆ ಅಥವಾ ಆಣೆ ನೀಡಿ ಬಾಡಿಗೆಗೆ ಸೈಕಲ್ ತರುತ್ತಿದ್ದೆವು.

ಬಾಲ್ಯದಲ್ಲಿ ಸೈಕಲ್ ಕಲಿಯುವಾಗ ನಾವೆಲ್ಲರೂ ವಿಭಿನ್ನ ಹಂತಗಳನ್ನು ದಾಟಿ ಬಂದಿದ್ದೇವೆ. ಸಣ್ಣ ವಯಸ್ಸಿನ ಮಕ್ಕಳಿಗೆ ಪೂರ್ಣವಾಗಿ ಸೀಟಿನ ಮೇಲೆ ಕೂತು ಪೆಡಲ್ ತಲುಪುತ್ತಿರಲಿಲ್ಲ. ಹಾಗಾಗಿ ಬಾರ್ನ ಕೆಳಗಿನಿಂದ ಕಾಲನ್ನಿಟ್ಟು ತುಳಿಯುವ ಹಾಫ್ ಪೆಡಲ್ (Half Pedal) ಅಥವಾ ಕ್ಯಾಚಿ ರೈಡಿಂಗ್ ಸಾಹಸ ಮಾಡುತ್ತಿದ್ದೆವು. ಅದಾದ ನಂತರ ಸ್ವಲ್ಪ ಎತ್ತರ ಬೆಳೆದ ಮೇಲೆ ಬಾರ್ ಮೇಲೆ ಕೂತು ಚಲಾಯಿಸುವ ಬಾರ್ ರೈಡಿಂಗ್ (Bar Riding) ಜ್ಞಾನ ಸಿದ್ಧಿಸುತ್ತಿತ್ತು. ಮಂಡಿ ಸುಲಿದುಕೊಂಡು, ಬಿದ್ದು ಎದ್ದು ಸೈಕಲ್ ಕಲಿತ ಆ ದಿನಗಳ ಆನಂದವೇ ಬೇರೆ.

**ಬೈಸಿಕಲ್ ಇತಿಹಾಸ:** ಇಷ್ಟೆಲ್ಲಾ ನೆನಪುಗಳನ್ನು ಮರುಕಳಿಸುವಂತೆ ಮಾಡಿದ ಈ ಬೈಸಿಕಲ್ ಹುಟ್ಟಿದ್ದು ಹೇಗೆ ಮತ್ತು ಇದಕ್ಕೆ ಜಾಗತಿಕ ದಿನದ ಮಾನ್ಯತೆ ಏಕೆ ಸಿಕ್ಕಿತು ಎಂಬುದನ್ನು ತಿಳಿಯುವುದು ರೋಚಕ. ಬೈಸಿಕಲ್ನ ಆರಂಭಿಕ ರೂಪವನ್ನು 1817ರಲ್ಲಿ ಜರ್ಮನಿಯ ಬ್ಯಾರನ್ ಕಾರ್ಲ್ ವಾನ್ ಡ್ರೈಸ್ (Karl von Drais) ಎಂಬುವವರು ರೂಪಿಸಿದರು. ಅದಕ್ಕೆ ಪೆಡಲ್ ಇರಲಿಲ್ಲ, ಕಾಲಿನಿಂದಲೇ ತಳ್ಳಿಕೊಂಡು ಹೋಗಬೇಕಿತ್ತು. ನಂತರ 1860ರ ದಶಕದಲ್ಲಿ ಫ್ರಾನ್ಸ್ನಲ್ಲಿ ಇದಕ್ಕೆ ಪೆಡಲ್ಗಳನ್ನು ಅಳವಡಿಸಲಾಯಿತು. 1880ರ ದಶಕದಲ್ಲಿ ಜಾನ್ ಕೆಂಪ್ ಸ್ಟಾರ್ಲಿ (John Kemp Starley) ಎಂಬುವವರು ಇಂದಿನ ಆಧುನಿಕ ರೂಪದ, ಸಮಾನ ಗಾತ್ರದ ಎರಡು ಚಕ್ರಗಳ ಸೇಫ್ಟಿ ಬೈಸಿಕಲ್ ಅನ್ನು ಪರಿಚಯಿಸಿದರು.

**ಭಾರತಕ್ಕೆ ಸೈಕಲ್ ಆಗಮನ:** ಬ್ರಿಟಿಷರ ಆಡಳಿತಾವಧಿಯಲ್ಲಿ, ಅಂದರೆ 20ನೇ ಶತಮಾನದ ಆರಂಭದಲ್ಲಿ ಬೈಸಿಕಲ್ ಭಾರತವನ್ನು ಪ್ರವೇಶಿಸಿತು. ಆರಂಭದಲ್ಲಿ ಇವು ಆಮದಾಗುತ್ತಿದ್ದವು. ಸ್ವಾತಂತ್ರ್ಯದ ನಂತರ, 1951ರಲ್ಲಿ ಜಂಕಿ ದಾಸ್ ಕಪೂರ್ ಅವರು ಹರಿಯಾಣದ ಸೋನೆಪತ್ನಲ್ಲಿ ಅಟ್ಲಾಸ್ (Atlas) ಸೈಕಲ್ ಸಂಸ್ಥೆಯನ್ನು ಪ್ರಾರಂಭಿಸಿದರು. ನಂತರದ ದಿನಗಳಲ್ಲಿ ಹರ್ಕ್ಯುಲಸ್ (Hercules), ಹೀರೋ (Hero) ಮತ್ತು ರ್ಯಾಲಿ (Raleigh) ಸಂಸ್ಥೆಗಳು ಭಾರತದ ಹಳ್ಳಿ ಹಳ್ಳಿಗಳಿಗೂ ಸೈಕಲನ್ನು ತಲುಪಿಸಿದವು. ಇದು ದೇಶದ ಗ್ರಾಮೀಣ ಆರ್ಥಿಕತೆಯ ಚಿತ್ರಣವನ್ನೇ ಬದಲಾಯಿಸಿತು.

**ವಿಶ್ವ ಬೈಸಿಕಲ್ ದಿನದ ಇತಿಹಾಸ:** ಬೈಸಿಕಲ್ನ ಸುಸ್ಥಿರತೆ, ಪರಿಸರ ಪೂರಕತೆ ಮತ್ತು ಆರೋಗ್ಯದ ಪ್ರಯೋಜನಗಳನ್ನು ಗುರುತಿಸಿ, ವಿಶ್ವಸಂಸ್ಥೆಯ ಮಹಾಸಭೆಯು (UN General Assembly) 2018ರ ಏಪ್ರಿಲ್ ತಿಂಗಳಿನಲ್ಲಿ ಅಧಿಕೃತ ನಿರ್ಣಯವನ್ನು ಅಂಗೀಕರಿಸಿತು. ಅದರಂತೆ ಪ್ರತಿ ವರ್ಷ ಜೂನ್ 3 ರಂದು ವಿಶ್ವ ಬೈಸಿಕಲ್ ದಿನ ಎಂದು ಆಚರಿಸಲು ತೀರ್ಮಾನಿಸಲಾಯಿತು. ಜಾಗತಿಕವಾಗಿ ಮಾಲಿನ್ಯ ನಿಯಂತ್ರಣ ಮತ್ತು ದೈಹಿಕ ಆರೋಗ್ಯವನ್ನು ಉತ್ತೇಜಿಸಲು ಈ ದಿನವನ್ನು ಆಚರಿಸಲಾಗುತ್ತದೆ.

**ಆಧುನಿಕ ಯುಗದಲ್ಲಿ ಬೈಸಿಕಲ್:** ಬಳಕೆ ಮತ್ತು ಸವಾಲುಗಳು

ಇಂದು ಕಾಲ ಬದಲಾಗಿದೆ. ಸೈಕಲ್ ಕೇವಲ ಬಡವರ ಅಥವಾ ಮಧ್ಯಮ ವರ್ಗದ ಅನಿವಾರ್ಯತೆಯಾಗಿ ಉಳಿದಿಲ್ಲ. ಅದೊಂದು ಜೀವನಶೈಲಿಯ ಭಾಗವಾಗಿದೆ.

**ಐಟಿ ಉದ್ಯೋಗಿಗಳು ಮತ್ತು ಫಿಟ್ನೆಸ್ ಟ್ರೆಂಡ್:** ಬೆಂಗಳೂರಿನಂತಹ ಮಹಾನಗರಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಐಟಿ ಕಂಪನಿಗಳ ಉದ್ಯೋಗಿಗಳು ಮತ್ತು ಯುವ ಪೀಳಿಗೆ ಸೈಕಲ್ ಬಳಕೆಯನ್ನು ಹೆಮ್ಮೆಯಿಂದ ಅಪ್ಪಿಕೊಳ್ಳುತ್ತಿದ್ದಾರೆ. ಸಂಚಾರ ದಟ್ಟಣೆ (Traffic) ತಪ್ಪಿಸಲು ಮತ್ತು ದಿನವಿಡೀ ಕುಳಿತು ಕೆಲಸ ಮಾಡುವುದರಿಂದ ಉಂಟಾಗುವ ಆರೋಗ್ಯ ಸಮಸ್ಯೆ ನಿವಾರಿಸಲು ಅನೇಕರು ಸೈಕಲ್ ಮೂಲಕ ಕಚೇರಿಗಳಿಗೆ ತೆರಳುತ್ತಿದ್ದಾರೆ. ಇಂದು ಬೈಸಿಕಲ್ ಕೇವಲ ಸಾರಿಗೆಯಲ್ಲ, ಅದೊಂದು ಅತ್ಯುತ್ತಮ ಫಿಟ್ನೆಸ್ ಉಪಕರಣ . ತೂಕ ನಿಯಂತ್ರಣ, ಹೃದಯದ ಆರೋಗ್ಯ ಮತ್ತು ಮಾನಸಿಕ ಒತ್ತಡ ನಿವಾರಣೆಗೆ ವೈದ್ಯರು ಕೂಡ ಸೈಕಲ್ ತುಳಿಯಲು ಸಲಹೆ ನೀಡುತ್ತಿದ್ದಾರೆ.

ಇದರೊಂದಿಗೆ ನಗರಗಳಲ್ಲಿ ಹತ್ತಾರು ಬೈಸಿಕಲ್ ಕ್ಲಬ್ ಗಳು (Bicycle Clubs) ಹುಟ್ಟಿಕೊಂಡಿವೆ. ವಾರಾಂತ್ಯದಲ್ಲಿ ನೂರಾರು ಕಿಲೋಮೀಟರ್ ಸೈಕಲ್ ರೈಡಿಂಗ್ (Cycling)ಮಾಡುವ ಮೂಲಕ ಪ್ರಕೃತಿಯನ್ನು ಸವಿಯುವ ಹೊಸ ಸಂಸ್ಕೃತಿ ಬೆಳೆದಿದೆ.

**ಜಾಗತಿಕವಾಗಿ ಮುಂಚೂಣಿಯಲ್ಲಿರುವ ದೇಶಗಳು**

ವಿಶ್ವದಲ್ಲೇ ಬೈಸಿಕಲ್ ಬಳಕೆಯಲ್ಲಿ ಯುರೋಪ್ ಖಂಡದ ದೇಶಗಳು ಅತ್ಯಂತ ಮುಂಚೂಣಿಯಲ್ಲಿವೆ. ಈ ಸಾಲಿನಲ್ಲಿ ಮೊದಲಿಗೆ ನಿಲ್ಲುವುದು ನೆದರ್ಲ್ಯಾಂಡ್ಸ್ (Netherlands). ಇಲ್ಲಿನ ಜನಸಂಖ್ಯೆಗಿಂತ ಸೈಕಲ್ಗಳ ಸಂಖ್ಯೆಯೇ ಹೆಚ್ಚಾಗಿದ್ದು, ದೇಶದ ಒಟ್ಟು ಪ್ರಯಾಣದ ಶೇಕಡಾ 36 ಕ್ಕಿಂತ ಹೆಚ್ಚು ಭಾಗ ಸೈಕಲ್ ಮೂಲಕವೇ ನಡೆಯುತ್ತದೆ.

ಇದರ ನಂತರದ ಸ್ಥಾನದಲ್ಲಿ ಡೆನ್ಮಾರ್ಕ್ (Denmark) ದೇಶವಿದ್ದು, ಅದರ ರಾಜಧಾನಿ ಕೋಪನ್ಹೇಗನ್ನಲ್ಲಿ ಶೇಕಡಾ 62 ರಷ್ಟು ಜನರು ತಮ್ಮ ದೈನಂದಿನ ಕಚೇರಿ ಹಾಗೂ ಶಾಲೆಗಳಿಗೆ ಹೋಗಲು ಸೈಕಲ್ ಅನ್ನೇ ಬಳಸುತ್ತಾರೆ. ಇನ್ನುಳಿದಂತೆ ಜರ್ಮನಿ ಮತ್ತು ಚೀನಾ ದೇಶಗಳು ಜಾಗತಿಕವಾಗಿ ಅತಿ ಹೆಚ್ಚು ಸೈಕಲ್ ಉತ್ಪಾದಿಸುವ ಮತ್ತು ಬಳಸುವ ಪ್ರಮುಖ ರಾಷ್ಟ್ರಗಳಾಗಿ ಗುರುತಿಸಿಕೊಂಡಿವೆ.

**ಸೈಕಲ್ ಸವಾರರ ಮುಂದಿರುವ ಸವಾಲುಗಳು**

ನಮ್ಮ ದೇಶದಲ್ಲಿ ಸೈಕಲ್ ಬಳಕೆ ಹೆಚ್ಚಾಗುತ್ತಿದೆಯಾದರೂ, ಸವಾರರ ಸುರಕ್ಷತೆಯ ವಿಷಯದಲ್ಲಿ ಇನ್ನೂ ಸಾಕಷ್ಟು ಸುಧಾರಣೆಯಾಗಬೇಕಿದೆ. ಭಾರತದ ರಸ್ತೆಗಳು ಮುಖ್ಯವಾಗಿ ಮೋಟಾರು ವಾಹನಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನಿರ್ಮಾಣವಾಗಿವೆ. ಸೈಕಲ್ ಸವಾರರಿಗೆ ಪ್ರತ್ಯೇಕ ಪಥಗಳು (Dedicated Cycle Lanes) ಇಲ್ಲದಿರುವುದು ದೊಡ್ಡ ಸವಾಲು. ಅತಿ ವೇಗವಾಗಿ ಬರುವ ವಾಹನಗಳ ನಡುವೆ ಸೈಕಲ್ ಚಲಾಯಿಸುವುದು ಜೀವಕ್ಕೆ ಅಪಾಯ ತಂದೊಡ್ಡುವಂತಿದೆ. ನಗರ ಯೋಜನೆಗಳನ್ನು ರೂಪಿಸುವಾಗ ಸೈಕಲ್ ಸವಾರರ ಸುರಕ್ಷತೆಗೆ ಆದ್ಯತೆ ನೀಡಬೇಕಾಗಿದೆ.

ನಾವು ಜಾಗತಿಕ ತಾಪಮಾನ ಮತ್ತು ಹವಾಮಾನ ವೈಪರೀತ್ಯದ ಕಾಲದಲ್ಲಿದ್ದೇವೆ. ಇಂತಹ ಸಂದರ್ಭದಲ್ಲಿ ಸಣ್ಣಪುಟ್ಟ ಬದಲಾವಣೆಗಳು ದೊಡ್ಡ ಪರಿಣಾಮ ಬೀರಬಲ್ಲವು.

**ಸಣ್ಣ ದೂರದ ಪ್ರಯಾಣ:** ಕನಿಷ್ಠ 1 ರಿಂದ 2 ಕಿಲೋಮೀಟರ್ ವ್ಯಾಪ್ತಿಯಲ್ಲಿರುವ ಅಂಗಡಿಗಳಿಗೆ, ಹಾಲಿನ ಬೂತ್ಗಳಿಗೆ ಹೋಗಲು ಬೈಕ್ ಕೀ ತೆಗೆದುಕೊಳ್ಳುವ ಬದಲು ಸೈಕಲ್ ಬಳಸಬಹುದು.

ಇಂಧನ ಉಳಿತಾಯ ಮತ್ತು ಪರಿಸರ ಕಾಳಜಿ: ಇದರಿಂದ ಇಂಧನ ಉಳಿತಾಯವಾಗುವುದಲ್ಲದೆ, ವಾಯು ಮಾಲಿನ್ಯ ಮತ್ತು ಶಬ್ದ ಮಾಲಿನ್ಯವನ್ನು ಗಣನೀಯವಾಗಿ ಕಡಿಮೆ ಮಾಡಬಹುದು.

ಆರೋಗ್ಯಕ್ಕೆ ಆದ್ಯತೆ: ಜಿಮ್ಗಳಿಗೆ ಹೋಗಿ ಹಣ ಖರ್ಚು ಮಾಡುವ ಬದಲು ದಿನಕ್ಕೆ ಅರ್ಧ ಗಂಟೆ ಸೈಕಲ್ ತುಳಿದರೆ ದೈಹಿಕ ದೃಢತೆ ತಾನಾಗಿಯೇ ಸಿದ್ಧಿಸುತ್ತದೆ.

ಬೈಸಿಕಲ್ ಎನ್ನುವುದು ಭೂತಕಾಲದ ನೆನಪಷ್ಟೇ ಆಗಿ ಉಳಿಯಬಾರದು. ಅದು ನಮ್ಮ ವರ್ತಮಾನ ಮತ್ತು ಭವಿಷ್ಯದ ಸುಸ್ಥಿರ ಬದುಕಿನ ದಾರಿಯಾಗಬೇಕು. ಬನ್ನಿ, ಈ ವಿಶ್ವ ಬೈಸಿಕಲ್ ದಿನದಂದು ನಮ್ಮ ಹಳೆಯ ಗೆಳೆಯನನ್ನು ಮತ್ತೆ ಮನೆಗೆ ಬರಮಾಡಿಕೊಳ್ಳೋಣ; ಆರೋಗ್ಯ ಹಾಗೂ ಪರಿಸರವನ್ನು ಕಾಪಾಡೋಣ.



| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email : Swamynathann@gmail.com

---

# ಓಡಿ ಹೋಗುವ ಮುನ್ನ ಅರಿತುಕೊಂಡು ಹೋಗಿ



| ಪುಷ್ಪ ಪ್ರಸಾದ್

ಹಲೋ ಹೆಲೋ ಘೂ ಈ ಹುಡುಗರು, ಹುಡುಗಿಯರು ಸರಿಯಾದ ಟೈಮ್ ಗೆ ರೂಮಿಂದ ಬರೋದು ಇಲ್ಲ ಫೋನ್ ಇಡೋದು ಇಲ್ಲ. ಊಟ ತಿಂಡಿ ಯಾವುದು ಬೇಡ, ಕೈಯಲ್ಲಿ ಮೊಬೈಲ್ ಇದ್ದರೆ ಸಾಕು, ಅದೇ ಎಲ್ಲಾವನ್ನು ಕೊಡುತ್ತದೆ. ದಿನಾ ಪೂರ್ತಿ ಸೋಷಿಯಲ್ ಮೀಡಿಯಾಗಳಲ್ಲೇ ಕಾಲ ಕಳೆಯವುದು ರು ಢಿ ಆಗೋಗಿದೆ. ಅತ್ತಲಿನಿಂದ ಮತ್ತೆ ಹೆಲೋ ಹೆಲೋ .... ಹಾ.... ಹೆಲೋ ಇನ್ನೂ ಮಲಗಿಲ್ವಾ ಅಪ್ಪ ಅಮ್ಮ ನೋಡಿಲ್ಲ ತಾನೇ ಅಯ್ಯೋ ಅವರಿಗೆ ಅದೆಲ್ಲಾ ಗೊತ್ತೂ ಆಗಲ್ಲ, ಈ ಇನ್ಸ್ಟ, ಫೇಸ್ಬುಕ್ ಅರ್ಥ ಆಗಲ್ಲಾ, ನೋಡು ಇವತ್ತು ರಾತ್ರಿ ನೀನು ಏನು ಮಾಡ್ತಿಯೋ ಗೊತ್ತಿಲ್ಲ ನಾವಿಬ್ರು ಎಲ್ಲಿಗಾದ್ರೂ ಓಡಿ ಹೋಗ್ಬಿಡೋಣ . ನೀನು ಆಗಲ್ಲಾ ಅದು ಹಾಗೆ ಹೀಗೆ ಅಂತ ಏನಾದ್ರೂ ಹೇಳೋದಿದ್ರೆ ಈಗಲೇ ಹೇಳು ನಾನು ಕೆರೆನೋ ಭಾವಿನೋ ನೋಡ್ಕೋತೀನಿ.. ಅಮ್ಮ ಬಂದ್ರು . ನಾ ಫೋನ್ ಇಡ್ತಾ ಇದ್ದೀನಿ ಬಾಯ್ ಲವ ಯೂ ಉಮ್ಮಾ ಇಂದು ರಾತ್ರಿ ಅವಳು ಅಮ್ಮ ಅಪ್ಪನ ಮನೆ ಬಿಟ್ಟು ತನ್ನ ಸೊ ಕಾಲ್ಡ್ ಇನಿಯನ ಜೊತೆಗೆ ಮುಂದಿನ ದಿನಗಳನ್ನು ಕಳೆಯಲು ತಯಾರಾಗುತ್ತಿರುವ ಮಗಳೊಬ್ಬಳು ತನ್ನವನೊಂದಿಗೆ ಮೊಬೈಲ್ ನಲ್ಲಿ ಮಾತನಾಡಿದ ಪರಿ ಇದು. ಇನ್ನೂ ಆ ಇನಿಯನಿಗೆ ತಲೆ ಕೆಟ್ಟರೆ ಅಷ್ಟೇ. ಆದರೆ ಹರೆಯದ ವಯಸ್ಸಿನಲ್ಲೇ ಪ್ರೀತಿಯಲ್ಲಿ ತೇಲಾಡುತ್ತಿರುವ ಹುಡುಗಿಗೆ ಇದ್ಯಾವುದು ಗೊತ್ತಿಲ್ಲ. ಇವಳ ಮೆ ಬೈಲಿನಲ್ಲಿ



ಕಂಡ ಒಂದು ಮೆಸ್ಸೇಜಿನಿಂದ ಇಬ್ಬರ ಪ್ರೀತಿಯ ಬಗ್ಗೆ ತಿಳಿದ ಪಾಲಕರು ಆಗಲೇ ಮಗಳ ಮೇಲೆ ಒಂದು ಕಣ್ಣಿಟ್ಟಿರುತ್ತಾರೆ. ಮಗಳಿಗೆ ತಿಳಿಹೇಳಲು ಸಾಕಷ್ಟು ಪ್ರಯತ್ನವನ್ನೂ ಮಾಡಿರುತ್ತಾರೆ. ಆದರೆ ಅದ್ಯಾವುದು ಇವಳಿಗೆ ಅರಿವಾಗದೇ ಪಾಲಕರಿಗೆ ಗೊತ್ತಿಲ್ಲದಂತೆ ಪ್ರೀತಿ ಆಳವಾಗಿ ಹೊಮ್ಮಿ ರುತ್ತದೆ, ಅಂದುಕೊಂಡಂತೆ ಅವರಿಬ್ಬರೂ ಆ ರಾತ್ರಿನೇ ಓಡಿ ಹೋಗ್ತಾರೆ. ಅಲ್ಲಿ ಹೋದ ಈ ಅಮಾಯಕಿ ಹುಡುಗಿ ಆ ಹುಡುಗ ಹಾಗೂ ಅವನ ಸಹಚರರ ಬಲೆಯಲ್ಲಿ ಸಿಕ್ಕಿ ಹಾಕಿಕೊಂಡು ಬಿಡುತ್ತಾಳೆ. ಅದನ್ನು ನೋಡಿದ ಅವಳಿಗೆ ಆಕಾಶವೇ ಮೈಮೇಲೆ ಬಿದ್ದಂತಾಗುತ್ತದೆ. ತನ್ನವನ ಜೊತೆ ಓಡಿಹೋದರೆ ಸಾಕು ಜಗತ್ತನ್ನೇ ಜಯಿಸಿ ಬಿಡುವೆ ಎಂದುಕೊಂಡವಳಿಗೆ ಹೀಗೆ ನಡುರಸ್ತೆಯಲಿ ಆ ಕಾಮಾಂಧರ ಮುಂದೆ ಆಕೆಯನ್ನು ಇನಿಯ ನಿಲ್ಲಿಸಿದಾಗ ಕಣ್ಮುಂದೆ ಪ್ರಶ್ನೆಗಳ ಮೇಲೆ ಪ್ರಶ್ನೆಗಳು ಕಾಡುತ್ತವೆ. ಅಪ್ಪ ಅಮ್ಮನ ಮಾತುಗಳು ನೆನಪಾಗುತ್ತವೆ. ಮುಂದೆ ಆಗಬಹುದಾದಂಥ ಎಲ್ಲಾ ಅನಾಹುತಗಳನ್ನ ಮೊದಲೇ ಅರಿತು ಬುದ್ಧಿ ಹೇಳಿದ ಅಪ್ಪ ಅಮ್ಮನ ನೆನೆದು ಕಣ್ಣೀರಿಡಲು ಶುರು ಮಾಡುತ್ತಾಳೆ. ಓಡಿ ಹೋಗುವ ಮುನ್ನ ಅರಿತುಕೊಳ್ಳಬೇಕಿದ್ದ ಅಪ್ಪ ಅಮ್ಮನ ಮಾತುಗಳನ್ನ ಅವಳು ಈಗ ನೆನಪು ಮಾಡಿಕೊಂಡು ಇನಿಯನ ನಂಬಿ ಮೋಸ ಹೋದೆ ಎನ್ನುವ ಸತ್ಯದ ಅರಿವಾಗುವ ಮುನ್ನವೇ ಕಾಮುಕರ ಕೈಗೆ ಸಿಕ್ಕಿ ಹೈರಾಣವಾಗಿಬಿಟ್ಟಿರುತ್ತಾಳೆ. ಹೀಗೆ ಇವತ್ತಿನ ಎಳೆಯ ಹುಡುಗ ಹುಡುಗಿಯರು ಈ ಸೋಷಿಯಲ್ ಮೀಡಿಯಗಳ ದಾಸರಾಗಿ, ಬೆಳೆಯಬೇಕಾದ ಚಿಗುರುಗಳು ಮದುಡಿ ಹೋಗುತ್ತಿವೆ. ಎಳೆಯ ಪ್ರಾಯದ ಹುಡುಗ ಹುಡುಗಿಯರೇ ಈ ಪ್ರೀತಿ, ಆಕರ್ಷಣೆಗಳು ಜೀವನದ ಒಂದು ಪಾಲು ಆಗಬೇಕೆ ಹೊರತು ಇದುವೇ ಜೀವನವಾಗಬಾರದು. ಈ ಬಾಳು ಎನ್ನುವುದು ಏನಾದರು ಸಾಧಿಸಲು ಸಿಗುವ ಒಂದು ಅವಕಾಶ ಎನ್ನುವುದನ್ನು ಮರೆಯಬಾರದು. ಹದಿಹರೆಯದ ವಯಸಿನಲ್ಲಿ ಸೋಷಿಯ್ ಮೀಡಿಯಾಗಳಲ್ಲಿ ಸಿಗುವ ಹುಚ್ಚು ಪ್ರೀತಿಗೆ ಬಲಿಯಾಗಿ ಅಪ್ಪ ಅಮ್ಮ ಮನೆಯ ಎಲ್ಲಾ ಸದಸ್ಯರನ್ನು ಬಿಟ್ಟು ಹೋಗಲು ತಯಾರಿ ಮಾಡುತ್ತಿರುವ ಹುಡುಗ ಹುಡುಗಿಯರೇ ದಯವಿಟ್ಟು ಓಡಿ ಹೋಗುವ ಮುನ್ನ ಅರಿತುಕೊಂಡು ಹೋಗಿ.

---

# ಪರಿಶ್ರಮದ ಪಥದಲ್ಲಿ ಅರಳಿದ ಐಪಿಎಸ್ ಕನಸು



| ಡಾ.ಸುಧಾಕರ.ಜಿ.ಲಕ್ಕವಳ್ಳಿ

ಸ್ಫೂರ್ತಿ ಸುಧೆ - 34

ಬದುಕಿನ ಹಾದಿಯಲ್ಲಿ ಕಷ್ಟಗಳು ಎಷ್ಟೇ ಕಾಡಿದರೂ, ಕನಸುಗಳ ಮೇಲಿನ ನಂಬಿಕೆ ಅಚಲವಾಗಿದ್ದರೆ ಯಶಸ್ಸು ದೂರವಿರುವುದಿಲ್ಲ. ಆಂಧ್ರ ಪ್ರದೇಶದ ಪ್ರಕಾಶಂ ಜಿಲ್ಲೆಯ ಸಿಂಗರಾಯಕೊಂಡದ ಉದಯ ಕೃಷ್ಣ ರೆಡ್ಡಿ ಅವರ ಬದುಕು ಇದಕ್ಕೆ ಸ್ಫೂರ್ತಿದಾಯಕ ಉದಾಹರಣೆ.

ರೈತ ಕುಟುಂಬದ ಬಡತನದ ನಡುವೆ ಬೆಳೆದ ಉದಯ, 2013ರಲ್ಲಿ ಕುಟುಂಬದ ಆಸರೆಯಾಗಲು ಪೊಲೀಸ್ ಇಲಾಖೆಗೆ ಕಾನ್ಸ್ಟೇಬಲ್ ಆಗಿ ಸೇರಿದರು. ಖಾಕಿ ತೊಟ್ಟು ಕರ್ತವ್ಯ ನಿರ್ವಹಿಸುತ್ತಿದ್ದ ದಿನಗಳಲ್ಲೇ ಅವರೊಳಗೆ ದೊಡ್ಡ ಕನಸೊಂದು ಮೊಳಕೆಯೊಡೆದಿತ್ತು. ಹಿರಿಯ ಅಧಿಕಾರಿಗಳ ಕಾರ್ಯವೈಖರಿ ಕಂಡಾಗ, ತಾವೂ ಸಮಾಜದ ಬದಲಾವಣೆಗೆ ಕಾರಣವಾಗುವ ಅಧಿಕಾರಿಯಾಗಬೇಕು ಎಂಬ ಸಂಕಲ್ಪ ಗಟ್ಟಿಯಾಯಿತು.

ಕರ್ತವ್ಯದ ಒತ್ತಡ, ನಿದ್ರೆಯಿಲ್ಲದ ರಾತ್ರಿಗಳು ಹಾಗೂ ಸೀಮಿತ ಅವಕಾಶಗಳ ನಡುವೆಯೂ ಅವರು ಓದನ್ನು ಕೈಬಿಡಲಿಲ್ಲ. ಬಿಡುವಿನ ಪ್ರತಿಯೊಂದು ಕ್ಷಣವನ್ನೂ ಯುಪಿಎಸ್ಸಿ ಸಿದ್ಧತೆಗೆ ಮೀಸಲಿಟ್ಟರು. ಸೋಲುಗಳು ಎದುರಾದರೂ ಛಲ ಕಳೆದುಕೊಳ್ಳದೆ ನಾಲ್ಕನೇ ಪ್ರಯತ್ನದಲ್ಲಿ





411ನೇ ಶ್ರೇಯಾಂಕ ಗಳಿಸಿ ಐಪಿಎಸ್ ಹುದ್ದೆಗೆ ಆಯ್ಕೆಯಾದರು. ನಿನ್ನೆ ಆದೇಶ ಪಾಲಿಸುತ್ತಿದ್ದ ಯುವಕ ಇಂದು ಆದೇಶ ನೀಡುವ ಅಧಿಕಾರಿಯಾಗಿ ಬೆಳೆದಿರುವುದು ಅವರ ಪರಿಶ್ರಮದ ವಿಜಯಗಾಥೆ. ಪರಿಸ್ಥಿತಿ ಅಲ್ಲ, ಪರಿಶ್ರಮವೇ ಭವಿಷ್ಯವನ್ನು ರೂಪಿಸುತ್ತದೆ ಎಂಬ ಸಂದೇಶವನ್ನು ಉದಯ ಕೃಷ್ಣ ರೆಡ್ಡಿ ತಮ್ಮ ಬದುಕಿನ ಮೂಲಕ ಸಾರಿದ್ದಾರೆ. ಅವರ ಸಾಧನೆ ಅನೇಕ ಯುವಕರ ಕನಸುಗಳಿಗೆ ಹೊಸ ಬೆಳಕಾಗಿದೆ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,